ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು –1**

ಸಂಖ್ಯೆ:ಸಿ1(1)ನೌ.ಸೇ.ಆನ್ ಲೈನ್/01/2018-19 ದಿನಾಂಕ.08-04-2019

**-:ಅಧಿಕೃತ ಜ್ಞಾಪನ:-**

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಎ ಮತ್ತು ಬಿ ಅಧಿಕಾರಿಗಳು ಹಾಗೂ ಎಲ್ಲಾ ವೃಂದದ ಭೋಧಕ/ಭೋಧಕೇತರ ನೌಕರರ ಸೇವಾ ಸೌಲಭ್ಯಗಳನ್ನು ಆನ್ ಲೈನ್ ತಂತ್ರಾಂಶದ ಮೂಲಕ ಸೇವೆ ಒದಗಿಸುವ ಕುರಿತು.

**ಉಲ್ಲೇಖ:**

1.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(3) ರ.ಮಂ.ಅ.102/2018-19 ದಿನಾಂಕ: 21.01.2019

2.ಸರ್ಕಾರದ ಆದೇಶ ಸಂಖ್ಯೆ: ಇಡಿ 02 ಡಿಎಆರ್ 2019 ದಿನಾಂಕ: 06.02.2019

3.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ2(2) ಸಿ.ಸಿ.ಎ/ಸು -1/2018-19 ದಿನಾಂಕ: 14.02.2019

4.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(7)ಪ್ರ.ಭ.ಮಂ-137/2018-19 ದಿನಾಂಕ: 30.03.2019

5.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(1)(2) ಪ್ರ.ದಿ.ಅ-01/2018-19 ದಿನಾಂಕ: 30.03.2019

6.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(5)ಹೆ.ಸೇ.ಸೆ-53/2018-19 ದಿನಾಂಕ: 03.04.2019

7.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ2(5) ವೇ.ಬ-01/2018-19 ದಿನಾಂಕ: 03.04.2019

8.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(6)(8) ಆಸ್ತಿ ಖರೀದಿ ಅನು-45/18-19 ದಿನಾಂಕ: 03.04.2019

9.ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಸಿ1(3)ಉ.ವ್ಯಾ.ಅ-149/2018-19 ದಿನಾಂಕ: 03.04.2019

********

ಸಾರ್ವಜನಿಕ ಶಿಕ್ಷಣ ಇಲಾಖೆಯು ಅತ್ಯಂತ ಮಹತ್ವದ ಹಾಗೂ ವಿಸ್ತಾರವಾದ ಇಲಾಖೆಯಾಗಿದ್ದು, ಈ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್-ಎ ಮತ್ತು ಬಿ ವೃಂದದ ಅಧಿಕಾರಿಗಳು ಹಾಗೂ ಎಲ್ಲಾ ವೃಂದದ ಭೋಧಕ/ಭೋಧಕೇತರ ನೌಕರರ ಸಂಖ್ಯೆ ಹೆಚ್ಚಾಗಿರುತ್ತದೆ.

ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ಕೆಳಕಂಡ ಸೇವಾ ಸೌಲಭ್ಯಗಳನ್ನು ಎಲ್ಲಾ ವೃಂದದ ಅಧಿಕಾರಿಗಳು ಮತ್ತು ಭೋಧಕ / ಭೋಧಕೇತರ ನೌಕರರಿಗೆ ಒದಗಿಸಬೇಕಿರುತ್ತದೆ. ಸದರಿ ಸೌಲಭ್ಯಗಳನ್ನು ಇಲಾಖೆಯ ಅಧಿಕಾರಿ / ನೌಕರರ ವೃಂದದವರು ಏಕ ಕಾಲದಲ್ಲಿ ಪಡೆಯಲು ಇಚ್ಛಿಸುವ ಸಂದರ್ಭಗಳು ಇದ್ದು, ಈ ಸೌಲಭ್ಯಗಳನ್ನು ತ್ವರಿತವಾಗಿ ಒದಗಿಸಲು ಸಾಧ್ಯವಾಗದೇ ಇರುವುದು ಕಂಡುಬಂದಿರುತ್ತದೆ.

ವಿವಿಧ ಹಂತಗಳಲ್ಲಿ ನಿಯಂತ್ರಣಾಧಿಕಾರಿಗಳ ಮುಖಾಂತರ ಇಲಾಖಾ ಮುಖ್ಯಸ್ಥರುಗಳಿಗೆ ಹಾಗೂ ಕೆಲವು ಸೌಲಭ್ಯಗಳನ್ನು ಪಡೆಯಲು ಸರ್ಕಾರಕ್ಕೆ ಸಲ್ಲಿಸಿ ಅನುಮತಿ ಪಡೆಯಬೇಕಾಗಿರುತ್ತದೆ. ಈ ಹಂತಗಳಲ್ಲಿ ವಿವಿಧ ಕಾರಣಗಳಿಂದ ವಿಳಂಬವಾಗಬಹುದು. ಇದರಿಂದ ಅಧಿಕಾರಿಗಳಿಗೆ ಆಡಳಿತ ಮತ್ತು ಕಛೇರಿ ಸಿಬ್ಬಂದಿ ವರ್ಗದವರಿಗೆ ದೈನಂದಿನ ಕಾರ್ಯಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುವ ಸಾಧ್ಯತೆಗಳಿರುತ್ತವೆ. ಇಂತಹ ಪ್ರಮುಖ ಸಮಸ್ಯೆಗಳಿಗೆ ಪರಿಹಾರೋಪಾಯವಾಗಿ ವಿವಿಧ ಸೇವೆಗಳನ್ನು ನಿಗಧಿತ ಅವಧಿಯೊಳಗೆ, ತ್ವರಿತವಾಗಿ ಒದಗಿಸಲು

ಹಾಗೂ ಸೌಲಭ್ಯ ಒದಗಿಸುವ ವ್ಯವಸ್ಥೆಯನ್ನು ಸರಳೀಕರಣಗೊಳಿಸಲು ಮತ್ತು ಸಿಬ್ಬಂದಿಗಳ ದಕ್ಷತೆ ಮತ್ತು ಕಾರ್ಯ ತತ್ಪರತೆಯಲ್ಲಿ ಉತ್ಸಾಹ ಹೆಚ್ಚಿಸಲು ಕೆಳಕಂಡ ಸೇವೆಗಳನ್ನು ಆನ್‌ಲೈನ್ ತಂತ್ರಾಂಶದ ಮುಖಾಂತರ ಒದಗಿಸಲು ಇಲಾಖೆ ನಿರ್ಣಯಿಸಿದೆ. ಸರ್ಕಾರದ ಆದೇಶದಂತೆ ಈಗಾಗಲೇ ಹಲವು ಸೇವೆಗಳು ಸಕಾಲಕ್ಕೆ ಒಳಪಟ್ಟಿರುತ್ತವೆ. ಹಾಗೂ ಮಾಹಿತಿ ಹಕ್ಕು ಅಧಿನಿಯಮ 2005 ಜಾರಿಯಲ್ಲಿರುತ್ತದೆ. ಇಲಾಖೆಯ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಮಿತವ್ಯಯ ಸಾಧಿಸಿದಂತಾಗುತ್ತದೆ. ಈ ಕಾರಣಗಳಿಂದ ಕೆಳಕಂಡ ಸೇವೆಗಳನ್ನು ಆನ್‌ಲೈನ್ ತಂತ್ರಾಂಶದಲ್ಲಿ ಅಳವಡಿಸುವುದು ಅತ್ಯಗತ್ಯವಾಗಿರುತ್ತದೆ. ಅದರಂತೆ ಆದೇಶಗಳನ್ನು ಹೊರಡಿಸಲಾಗಿದೆ.

**1.ವಿವಿಧ ರಜಾ ಸೌಲಭ್ಯಗಳು:-**

ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ವಿವಿಧ ರಜಾ ಸೌಲಭ್ಯಗಳನ್ನು ಪಡೆಯಲು ಮನವಿಗಳನ್ನು ಶಿಫಾರಸ್ಸು/ಅನುಮೋದನೆ ಪ್ರಾಧಿಕಾರಿಗಳಿಗೆ ಸಲ್ಲಿಸುತ್ತಿದ್ದು, ಈ ಸೌಲಭ್ಯವನ್ನು ಸಕಾಲದಲ್ಲಿ ಒದಗಿಸಬೇಕಾಗಿದೆ. ಈ ಪ್ರಕ್ರಿಯೆಯನ್ನು ಸರಳೀಕರಿಸಲು ಹಾಗೂ ತ್ವರಿತಗೊಳಿಸಲು ಆನ್‌ಲೈನ್ ಮುಖಾಂತರ ರಜಾ ನಿರ್ವಾಹಣಾ ವ್ಯವಸ್ಥೆಯನ್ನು ಸಿದ್ದಪಡಿಸಿದ್ದು, ಇನ್ನು ಮುಂದೆ ಎಲ್ಲಾ ವರ್ಗದ ಅಧಿಕಾರಿಗಳು/ಸಿಬ್ಬಂದಿ ವರ್ಗದ ವಿವಿಧ ರಜಾ ಸೌಲಭ್ಯಗಳನ್ನು ಪಡೆಯಲು ಆನ್‌ಲೈನ್ ಮುಖಾಂತರ ವ್ಯವಹರಿಸಬೇಕಾಗಿದೆ. ಈ ಸಂಬಂಧ ಅಧಿಕೃತ ಜ್ಞಾಪನ ಸಂಖ್ಯೆ:ಸಿ1(3)ರ.ಮಂ.ಅ-102/2018-19 ದಿನಾಂಕ.21.01.2019 ರಲ್ಲಿ ಜ್ಞಾಪನ ಹೊರಡಿಸಲಾಗಿದೆ.

**2.ಪಾಸ್‌ಪೋರ್ಟ್ ಪಡೆಯಲು ಹಾಗೂ ವಿದೇಶ ಪ್ರವಾಸಕ್ಕೆ ನಿರಾಪೇಕ್ಷಣಾ ಪತ್ರ:-**

ಗ್ರೂಪ್-ಎ ಮತ್ತು ಬಿ ವೃಂದದ ಅಧಿಕಾರಿಗಳು, ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರು, ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಾಂಶುಪಾಲರು, ಬೋಧಕ ವೃಂದದ ಉಪನ್ಯಾಸಕರು ಹಾಗೂ ಬೊಧಕೇತರ ವೃಂದದ ಸಿಬ್ಬಂದಿಯವರ ಸಂಖ್ಯೆಯು ದೊಡ್ಡ ಪ್ರಮಾಣದಲ್ಲಿದ್ದು ಪಾಸ್‌ಪೋರ್ಟ್ ಪಡೆಯಲು/ನವೀಕರಿಸಲು ನಿರಾಕ್ಷೇಪಣಾ ಪತ್ರ ಕೋರುವ ಮನವಿ ಹಾಗೂ ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿಗಾಗಿ ಸಲ್ಲಿಸುವ ಅರ್ಜಿಗಳ ಬಗ್ಗೆ ಸಕಾಲದಲ್ಲಿ ಒದಗಿಸುವುದು ಕಷ್ಟಸಾಧ್ಯವಾಗಿದೆ. ಈ ಪ್ರಕ್ರಿಯೆಯನ್ನು ಸುಲಭಗೊಳಿಸಲು ಹಾಗೂ ತ್ವರಿತಗೊಳಿಸಲು ಆನ್‌ಲೈನ್‌ನಲ್ಲಿ ಸೇವೆಗಳನ್ನು ಸೃಜಿಸಿ ನಿರ್ವಹಿಸಲು ಇಲಾಖೆಯು ಇಚ್ಚಿಸಿದ್ದು, ಅದರಂತೆ ಸರ್ಕಾರದ ಆದೇಶ ಸಂಖ್ಯೆ:ಇಡಿ 02 ಡಿಎಆರ್ 2019 ದಿನಾಂಕ.06.02.2019 ರಲ್ಲಿ ಪಾಸ್‌ಪೋರ್ಟ್ ಪಡೆಯಲು ನಿರಾಪೇಕ್ಷಣಾ ಪತ್ರ ಹಾಗೂ ವಿದೇಶ ಪ್ರವಾಸ ಕೈಗೊಳ್ಳಲು ಅನುಮತಿಗಾಗಿ ಪ್ರಸ್ತಾವನೆಗಳನ್ನು ನಿಗಧಿತ ತಾಳೆಪಟ್ಟಿಯಲ್ಲಿ ಆನ್‌ಲೈನ್ ತಂತ್ರಾಂಶದ ಮುಖಾಂತರ ಸಲ್ಲಿಸಲು ಅನುವಾಗುವಂತೆ ವರದಿ ಮಾಡುವ ಪ್ರಾಧಿಕಾರಿ ಹಾಗೂ ಅನುಮತಿ ನೀಡುವ ಪ್ರಾಧಿಕಾರಿಗಳನ್ನು ಅನುಬಂಧ-1 ಮತ್ತು 2 ರಲ್ಲಿ ನಮೂದಿಸಿರುವಂತೆ ನಿಗಧಿಪಡಿಸಿ ಸರ್ಕಾರ ಆದೇಶ ಹೊರಡಿಸಿದೆ.

**3.ಶಿಸ್ತು ಪ್ರಕರಣಗಳು:-**

ಇಲಾಖೆಯಲ್ಲಿನ ಎಲ್ಲಾ ವೃಂದದ ಅಧಿಕಾರಿಗಳು ಮತ್ತು ಬೋಧಕ/ಬೋಧಕೇತರ ನೌಕರರ ಮೇಲಿನ ಶಿಸ್ತು ಪ್ರಕರಣಗಳನ್ನು ನಿಗಧಿಪಡಿಸದ ಅವಧಿಯೊಳಗೆ ತ್ವರಿತಗತಿಯಲ್ಲಿ ಇತ್ಯರ್ಥಪಡಿಸುವ ಹಿನ್ನಲೆಯಲ್ಲಿ, ಇಲಾಖಾ ಶಿಸ್ತು ಪ್ರಕರಣಗಳನ್ನು ಆನ್‌ಲೈನ್ ಮೂಲಕ ತಂತ್ರಾಂಶದಲ್ಲಿ ಇಂಧೀಕರಿಸಿ ನಿರ್ವಹಿಸಲು ಇಲಾಖೆಯು ಉದ್ದೇಶಿಸಿರುತ್ತದೆ. ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ,ನಿಯಂತ್ರಣ ಮತ್ತು ಅಪೀಲು) ನಿಯಮಗಳು-1957, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ಮತ್ತು ತತ್ಸಂಬಂಧ ಸರ್ಕಾರದಿಂದ ಹೊರಡಿಸುವ ಆದೇಶ/ಸುತ್ತೋಲೆಗಳಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವೃಂದದ ಅಧಿಕಾರಿಗಳು ಮತ್ತು ಬೋಧಕ/ಬೋಧಕೇತರ ನೌಕರರ ಇಲಾಖಾ ಶಿಸ್ತು ಪ್ರಕರಣಗಳು ಮತ್ತು ದೂರುಗಳನ್ನು ಆನ್‌ಲೈನ್ ಮುಖಾಂತರ ವ್ಯವಹರಿಸಬೇಕಾಗಿದೆ. ಈ ಸಂಬಂಧ ಅಧಿಕೃತ ಜ್ಞಾಪನ ಸಂಖ್ಯೆ:ಸಿ2(2)ಸಿ.ಸಿ.ಎ/ಸು-1/2018-19 ದಿನಾಂಕ.14.02.2019 ರಲ್ಲಿ ಜ್ಞಾಪನ ಹೊರಡಿಸಲಾಗಿದೆ.

**4.ಪ್ರಭಾರ ಭತ್ಯೆ ಮಂಜೂರಾತಿ:-**

ಅಧಿಕಾರಿಗಳು ಹಾಗೂ ಬೋಧಕ/ಬೋಧಕೇತರರು ತಮ್ಮ ಕಾರ್ಯ ವ್ಯಾಪ್ತಿಗೆ ಸೀಮಿತವಾಗಿರುವ ಪ್ರಭಾರ ಭತ್ಯೆ ಮಂಜೂರಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಇಲಾಖೆಯ ಸಿಬ್ಬಂದಿ/ಅಧಿಕಾರಿಗಳು ನಿಯಮ-32 ಮತ್ತು 68 ರಡಿಯಲ್ಲಿ ಪ್ರಭಾರ ಭತ್ಯೆ ಮಂಜೂರಾತಿಗಾಗಿ ಪ್ರಸ್ತಾವನೆಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸಲು ಅನುವಾಗುವಂತೆ ಹಾಗೂ ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ಪ್ರಭಾರ ಭತ್ಯೆಯ ಮಂಜೂರಾತಿಗಾಗಿ ಹೊರಡಿಸುವ ಸುತ್ತೋಲೆ/ಸರ್ಕಾರದ ಆದೇಶಗಳ ಷರತ್ತುಗಳ ಅನುಸಾರವಾಗಿ ಶಿಫಾರಸ್ಸು ಮಾಡುವ/ಅನುಮತಿ ನೀಡುವ ಪ್ರಾಧಿಕಾರಿಗಳು ಆನ್‌ಲೈನ್ ಮುಖಾಂತರವೇ ನಿರ್ವಹಿಸಲು ತಿಳಿಸಿದೆ.

ಪ್ರಭಾರ ಭತ್ಯೆ ಮಂಜೂರಾತಿ ಮಾಡುವ ಸಂಬಂಧ, ಶಿಫಾರಸ್ಸು ಮಾಡುವ ಪ್ರಾಧಿಕಾರ ಟಿಡಿಎಸ್ ನಲ್ಲಿನ ಮಾಹಿತಿಯಂತೆ, ನೌಕರರ ಹೆಸರು, ಸೇವಾ ವಿವರ, ನಿಯಮ-32 ರಡಿಯಲ್ಲಿ ಸ್ಥಾನಪನ್ನದ ಬಗ್ಗೆ ಮಾಹಿತಿ ಅಥವಾ ನಿಯಮ-68ರಡಿಯಲ್ಲಿ ಆದೇಶದ ಪ್ರತಿ, ಪದಗ್ರಾಹಿ ಮತ್ತು ಪದಮುಕ್ತದ ಬಗ್ಗೆ ಮಾಹಿತಿ, ಸಲ್ಲಿಸಿರುವ ಮನವಿ ಪತ್ರಗಳನ್ನು ಪರಿಶೀಲಿಸಿ ಅನುಮೋದನೆ ಪ್ರಾಧಿಕಾರಕ್ಕೆ ಸಲ್ಲಿಸುವುದು. ಈ ಸಂಬಂಧ ಅಧಿಕೃತ ಜ್ಞಾಪನ ಸಂಖ್ಯೆ:ಸಿ1(7)/ಪ್ರ.ಭ.ಮಂ-137/2018-19 ದಿನಾಂಕ.30.03.2019 ರಲ್ಲಿ ಜ್ಞಾಪನ ಹೊರಡಿಸಲಾಗಿದೆ.

**5.ಅಧಿಕಾರಿಗಳ ಪ್ರವಾಸ ದಿನಚರಿ ನಿರ್ವಹಣೆ/ಅನುಮೋದನೆ:-**

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಗ್ರೂಪ್-ಎ ಮತ್ತು ಗ್ರೂಪ್-ಬಿ ಅಧಿಕಾರಿಗಳ ಕಾರ್ಯನಿರ್ವಹಣೆಯ ಪ್ರಮುಖ ಭಾಗ ಶೈಕ್ಷಣಿಕ ಮೇಲ್ವಿಚಾರಣೆಯಾಗಿದ್ದು, ಶಾಲೆಗಳು, ಶಿಕ್ಷಕರ ತರಬೇತಿ ಕೇಂದ್ರಗಳು ಮತ್ತು ಇವರ ಪ್ರಮುಖ ಕಾರ್ಯಕ್ರಮಗಳ ಮೇಲುಸ್ತುವಾರಿಗಾಗಿ ಪ್ರವಾಸ ಕೈಗೊಳ್ಳಬೇಕಾಗಿದೆ. ಪ್ರತಿ ಮಾಹೆಯ 28 ನೇ ತಾರೀಖಿನೊಳಗೆ ಪ್ರವಾಸ ಪಟ್ಟಿ ತಯಾರಿಸಿ ಅನುಮೋದನೆ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಳ್ಳುವುದು. ಪ್ರತಿ ಮಾಹೆಯ ಪ್ರವಾಸದ ದಿನಚರಿಯನ್ನು ದಾಖಲೆಗಳೊಂದಿಗೆ ನಿಯಂತ್ರಣಾಧಿಕಾರಿಗಳಿಗೆ ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಸಲ್ಲಿಸುವುದು ಅವಶ್ಯಕತೆಯಾಗಿರುತ್ತದೆ. ದಿನಚರಿ ವಿವರ ಸಂಬಂಧಿಸಿದ ಅಧಿಕಾರಿಗೆ ಮತ್ತು ಫಲಾನುಭವಿಗಳಿಗೆ ಹಾಗೂ ನಿಯಂತ್ರಣಾಧಿಕಾರಿ ಮತ್ತು ರಾಜ್ಯ/ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ಪಡೆಯಲು ಮತ್ತು ಅನುಪಾಲನೆಗಾಗಿ ಪ್ರವಾಸ ಪಟ್ಟಿ/ದಿನಚರಿಯನ್ನು ಆನ್‌ಲೈನ್ ವ್ಯವಸ್ಥೆಗೆ ಒಳಪಡಿಸಿರುವುದರಿಂದ ಅಧಿಕಾರಿಗಳ ಪ್ರವಾಸ ದಿನಚರಿ ನಿರ್ವಹಣೆ ಅನುಮೋದನೆಗೆ ಸಂಬಂದಿಸಿದ ಪ್ರಕ್ರಿಯೆ ಸರಳೀಕರಿಸಲು ಹಾಗೂ ತ್ವರಿತಗೊಳಿಸಲು ಆನ್ ಲೈನ್ ಮುಖಾಂತರ ವ್ಯವಹರಿಸಬೇಕಾಗಿರುತ್ತದೆ. ಅಧಿಕಾರಿಗಳು ಪ್ರವಾಸ ದಿನಚರಿ ನಿರ್ವಹಣೆ ಅನುಮೋದನೆಗೆ ಪ್ರಸ್ತಾವನೆಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಅನುವಾಗುವಂತೆ ಪ್ರಕ್ರಿಯೆಯನ್ನು ತಂತ್ರಾಂಶದ ಟಿ.ಡಿ.ಎಸ್ ಗೆ ಲಿಂಕ್ ಮಾಡಲಾಗಿದೆ. ಈ ಸಂಬಂಧ ಅಧಿಕೃತ ಜ್ಞಾಪನ ಸಂಖ್ಯೆ:ಸಿ1(1)(2)ಪ್ರ.ದಿ.ಅ 01/2018-19 ದಿನಾಂಕ.30.03.2019 ರಲ್ಲಿ ಜ್ಞಾಪನ ಹೊರಡಿಸಲಾಗಿದೆ.

**6.ಅರ್ಹತಾದಾಯಕ ಸೇವೆ ಸೇರ್ಪಡೆ ಅನುಮೋದನೆ:-**

ಇಲಾಖೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢಶಾಲಾ ಸಹ ಶಿಕ್ಷಕರ ಸಂಖ್ಯೆ ಹೆಚ್ಚಾಗಿದ್ದು ಪ್ರತಿ ವರ್ಷ ನಿವೃತ್ತಿಯಿಂದ ಖಾಲಿಯಾಗುವ ಹುದ್ದೆಗಳಿಗೆ ಸಿ.ಇ.ಟಿ ಮುಖಾಂತರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ. ಅನುಕಂಪದ ಆಧಾರದ ಮೇಲೆ ಬೋಧಕೇತರ ಹುದ್ದೆ ಭರ್ತಿ ಮಾಡಲಾಗುತ್ತಿದೆ. ಸೇವಾ ನಿರತ ಮತ್ತು ನೇಮಕಾತಿಯಲ್ಲಿ ಹೆಚ್ಚಿನ ವಯೋಮಿತಿ ನಿಗಧಿಗೆ ಅವಕಾಶವಿರುತ್ತದೆ.

ಕರ್ನಾಟಕ ಸಿವಿಲ್ ಸೇವಾ ನಿಯಮಗಳು-247ಎ/248ಎ/252ಬಿ/224ಎ ರನ್ವಯ ಹಿಂದಿನ ಸೇವೆಯನ್ನು ಸೇರ್ಪಡೆ ಮಾಡಿ ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಲು ಹೆಚ್ಚುವರಿ ಸೇರ್ಪಡೆಗೆ ಪ್ರಸ್ತಾವನೆಗಳು ಅಧಿಕ ಸಂಖ್ಯೆಯಲ್ಲಿ ಸ್ವೀಕೃತವಾಗಿರುತ್ತವೆ. ಅನುಮತಿ ಪಡೆಯಲು ಸಕಾಲದಲ್ಲಿ ಮನವಿಗಳನ್ನು ಶಿಫಾರಸ್ಸಿನೊಂದಿಗೆ ಸಂಬಂಧಿಸಿದ ಪ್ರಾಧಿಕಾರಿಗಳಿಗೆ ಸಲ್ಲಿಕೆಯಾಗದೇ ಇರುವುದು ಹಾಗೂ ಈ ಪ್ರಕ್ರಿಯೆ ತ್ವರಿತವಾಗಿ ಪೂರ್ಣಗೊಳಿಸಲು ಸಾಧ್ಯವಾಗದೆ ಇರುವುದು ಕಂಡುಬಂದಿದೆ. ಈ ಪ್ರಕ್ರಿಯೆಯನ್ನು ಸರಳೀಕರಿಸಲು ಹಾಗೂ ತ್ವರಿತಗೊಳಿಸಲು ಆನ್‌ಲೈನ್ ಮುಖಾಂತರ ವಿವಿಧ ಸನ್ನಿವೇಶಗಳಲ್ಲಿನ ಸೇವೆಯನ್ನು ಈ ಪ್ರಸ್ತಾವನೆಗಳಿಗೆ ಹೆಚ್ಚುವರಿ ಸೇವೆ ಸೇರ್ಪಡೆ ಮಾಡುವ

ವ್ಯವಸ್ಥೆಯನ್ನು ಆನ್‌ಲೈನ್ ಮುಖಾಂತರ ವ್ಯವಹರಿಸಬೇಕಾಗಿದೆ. ಈ ಸಂಬಂಧ ಅಧಿಕೃತ ಜ್ಞಾಪನ ಸಂಖ್ಯೆ:ಸಿ1(5)/ಹೆ.ಸೇ.ಸೆ-53/2018-19 ದಿನಾಂಕ.30.04.2019 ರಲ್ಲಿ ಜ್ಞಾಪನ ಹೊರಡಿಸಲಾಗಿದೆ.

**7.ಕಾಲಮಿತಿ ವೇತನ ಬಡ್ತಿ/ಸ್ವಯಂ ಚಾಲಿತ ವೇತನ ಬಡ್ತಿ/20,25,30 ವರ್ಷಗಳ ಹೆಚ್ಚುವರಿ ಬಡ್ತಿ/ಸ್ಥಗಿತ ವೇತನ ಬಡ್ತಿ ಮಂಜೂರಾತಿ:-**

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಅಧಿಕಾರಿ/ಬೋದಕ/ಬೋದಕೇತರ ವೃಂದದ ಎಲ್ಲಾ ಅಧಿಕಾರಿ / ಸಿಬ್ಬಂದಿಗಳಿಗೆ ಉಲ್ಲೇಖದ ಕೆ.ಸಿ.ಎಸ್. ಸೇವಾ ನಿಯಮದಂತೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿ /15 ಸ್ವಯಂ ಚಾಲಿತ ವೇತನ ಬಡ್ತಿ /20, 25, 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿ ಹಾಗೂ/ಸ್ಥಗಿತ ವೇತನ ಬಡ್ತಿ/ಹೆಚ್ಚುವರಿ ವೇತನ ಬಡ್ತಿ/ವಿಶೇಷ ವೇತನ ಬಡ್ತಿ/ಅಂಗವಿಕಲ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಸಕಾಲದಲ್ಲಿ ಮಂಜೂರು ಮಾಡುವುದು ಇಲಾಖೆಯ ಜವಾಬ್ದಾರಿಯಾಗಿರುತ್ತದೆ.

ಅಧಿಕಾರಿಗಳು ಮತ್ತು ಸಿಬ್ಬಂದಿಗಳು ವೇತನ ಬಡ್ತಿಗಳನ್ನು ಪಡೆಯಲು ಇಲಾಖೆಯ ಅನುಮತಿಗಾಗಿ ಪ್ರಸ್ತಾವನೆಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಅನುವಾಗುವಂತೆ ಹಾಗೂ ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ಆಗಿದಾಂಗ್ಗೆ ಹೊರಡಿಸುವ ಸರ್ಕಾರದ ಸುತ್ತೋಲೆ/ ಆದೇಶಗಳ ಷರತ್ತುಗಳ ಅನುಸಾರವಾಗಿ ಶಿಫಾರಸ್ಸು ಮಾಡುವ ಮತ್ತು ಅನುಮತಿ ನೀಡುವ ಪ್ರಾಧಿಕಾರಿಗಳು ಆನ್‌ಲೈನ್ ಮುಖಾಂತರವೇ ನಿರ್ವಹಿಸಿ ಇತ್ಯರ್ಥಪಡಿಸಲು ತಿಳಿಸಿದೆ. ಈ ಸಂಬಂಧ ಅಧಿಕೃತ ಜ್ಞಾಪನ ಸಂಖ್ಯೆ:ಸಿ2(5)ವೇ.ಬ/01/2018-19 ದಿನಾಂಕ.03.04.2019 ರಲ್ಲಿ ಜ್ಞಾಪನ ಹೊರಡಿಸಲಾಗಿದೆ.

**8.ಚರಾಸ್ತಿ ಮತ್ತು ಸ್ಥಿರಾಸ್ಥಿ ಖರೀದಿಸಲು ಅನುಮತಿ:-**

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಎ ಮತ್ತು ಬಿ ಅಧಿಕಾರಿಗಳು ಹಾಗೂ ಬೋಧಕ/ಬೋಧಕೇತರ ವೃಂದದ ನೌಕರರು, ಇನ್ನು ಮುಂದೆ ನಿವೇಶನ ಖರೀದಿ, ಗೃಹ ನಿರ್ಮಾಣ, ವಾಹನ, ಮತ್ತು ಇತರೆ ಸ್ಥಿರ ಹಾಗೂ ಚರಾಸ್ತಿ ಖರೀದಿಸಲು ಆನ್‌ಲೈನ್ ಮುಖಾಂತರ ವ್ಯವಹರಿಸಲು ಪ್ರಸ್ತಾವನೆಯೊಂದಿಗೆ ಸ್ಥಿರ/ಚರಾಸ್ಥಿಯ ಮೌಲ್ಯ, ಖರೀದಿ ಮೂಲ, ಆದಾಯ ತೆರಿಗೆ ವಿವರ, ಕಳೆದ 3ವರ್ಷಗಳ ಆಸ್ತಿ/ಋಣ ಘೋಷಣೆ, ಇತರೆ ಅಂಶಗಳನ್ನು ಪರಿಶೀಲಿಸಿ ಶಿಫಾರಸ್ಸು ಪ್ರಾಧಿಕಾರವು ಅಗತ್ಯವಿರುವ ಎಲ್ಲಾ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವುದು. ಅನುಮತಿಗಾಗಿ ಅಗತ್ಯವಾಗಿ ಬೇಕಾಗುವ ಮಾಹಿತಿಗಳನ್ನು ಅಧಿಕಾರಿ/ನೌಕರರ/ ಟಿಡಿಎಸ್/ಇಡಿಎಸ್/ ಹೆಚ್.ಆರ್.ಎಂ.ಎಸ್/ ಜಿ.ಪಿ.ಎಫ್/ಕೆ.ಜಿ.ಐ.ಡಿಗೆ ಲಿಂಕ್ ಮಾಡಿ ಮಾಹಿತಿ ಪಡೆಯಲು ತಂತ್ರಾಂಶದಲ್ಲಿ ಅವಕಾಶ ಮಾಡಿದೆ. ಅಧಿಕಾರಿಗಳು ತಮ್ಮ ಕಾರ್ಯ ವ್ಯಾಪ್ತಿಗೆ ಸೀಮಿತವಾಗಿರುವ ಸ್ಥಿರ ಮತ್ತು ಚರಾಸ್ತಿಗಳ ಖರೀದಿ ಅನುಮತಿ ಪಡೆಯಲು, ಆಯಾ ವಿಷಯಕ್ಕೆ ನಿಗಧಿಪಡಿಸಲಾದ ಚೆಕ್‌ಲಿಸ್ಟ್‌ನಂತೆ ಅಗತ್ಯವಿರುವ ಎಲ್ಲಾ ಪೂರಕ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಅನುವಾಗುವಂತೆ ಹಾಗೂ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966ರ ಉಪನಿಯಮ 23(2)ರ ಪ್ರಕಾರ ಷರತ್ತುಗಳ ಅನುಸಾರವಾಗಿ ಶಿಫಾರಸ್ಸು ಮಾಡುವ/ಅನುಮತಿಯನ್ನು ನೀಡುವ ಪ್ರಾಧಿಕಾರಿಗಳು ಆನ್‌ಲೈನ್ ಮುಖಾಂತರವೇ ನಿರ್ವಹಿಸಲು ತಿಳಿಸಿದೆ. ಈ ಸಂಬಂಧ ಅಧಿಕೃತ ಜ್ಞಾಪನ ಸಂಖ್ಯೆ:ಸಿ1(6)ಆಸ್ತಿ.ಖರೀದಿ.ಅನು/45/2018-19 ದಿನಾಂಕ.03.04.2019 ರಲ್ಲಿ ಜ್ಞಾಪನ ಹೊರಡಿಸಲಾಗಿದೆ.

**9.ಉನ್ನತ ವ್ಯಾಸಂಗಕ್ಕೆ ಅನುಮತಿ:-**

ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರೂಪ್-ಎ ಮತ್ತು ಬಿ ಅಧಿಕಾರಿಗಳು ಹಾಗೂ ಬೋಧಕ/ಬೋಧಕೇತರ ವೃಂದದ ಸಿಬ್ಬಂದಿಯ ಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿದೆ. ಇಲಾಖೆಯ ಮೂಲ ಉದ್ದೇಶದಂತೆ, ಸೇವಾ ನಿರತ ಅಧಿಕಾರಿಗಳು ಹಾಗೂ ಬೋಧಕ/ಬೋಧಕೇತರ ವೃಂದದವರಿಗೆ ನಿರಂತರ ಕಲಿಕಾ ಅನುಭವ ಅತ್ಯವಶ್ಯಕವಾಗಿದೆ. ಈ ಉದ್ದೇಶದಿಂದ ಅಧಿಕಾರಿಗಳು ಹಾಗೂ ಬೋಧಕ/ಬೋಧಕೇತರ ವೃಂದದವರಿಗೆ ವೃತ್ತಿ ಕೌಶಲ್ಯ ಸಂಬಂಧ ವಿವಿಧ ಉನ್ನತ ವ್ಯಾಸಂಗದ ಸೌಲಭ್ಯಗಳನ್ನು ಪಡೆಯಲು ಅನುಮತಿಗಾಗಿ ಪ್ರಾಧಿಕಾರಿಗಳಿಗೆ

ಶಿಫಾರಸ್ಸು ಮನವಿಗಳು ಸಲ್ಲಿಕೆಯಾಗುತ್ತಿದೆ. ಈ ಸೌಲಭ್ಯವನ್ನು ಸಕಾಲದಲ್ಲಿ ಒದಗಿಸುವುದು ಇಲಾಖೆಯ ಆದ್ಯ ಕರ್ತವ್ಯವಾಗಿರುತ್ತದೆ. ಈ ಪ್ರಕ್ರಿಯೆಯನ್ನು ಸರಳೀಕರಿಸಲು ಹಾಗೂ ತ್ವರಿತಗೊಳಿಸಲು ಆನ್‌ಲೈನ್ ಮುಖಾಂತರ ಉನ್ನತ ವ್ಯಾಸಂಗದ ನಿರ್ವಹಣಾ ವ್ಯವಸ್ಥೆಯನ್ನು ಸಿದ್ಧಪಡಿಸಿದ್ದು, ಇನ್ನು ಮುಂದೆ ಎಲ್ಲಾ ವರ್ಗದ ಅಧಿಕಾರಿಗಳು/ಬೋಧಕ ಸಿಬ್ಬಂದಿಗಳು ಉನ್ನತ ವ್ಯಾಸಂಗ ಸೌಲಭ್ಯಗಳನ್ನು ಪಡೆಯಲು ಆನ್‌ಲೈನ್ ಮುಖಾಂತರವೇ ವ್ಯವಹರಿಸಬೇಕಾಗಿದೆ. ಈ ಸಂಬಂಧ ಅಧಿಕೃತ ಜ್ಞಾಪನ ಸಂಖ್ಯೆ. ಸಿ1(3)ಉ.ವ್ಯಾ.ಅ-149/2018-19 ದಿನಾಂಕ.03.04.2019 ರಲ್ಲಿ ಜ್ಞಾಪನ ಹೊರಡಿಸಲಾಗಿದೆ.

ಕರ್ನಾಟಕ ಸೇವಾ ನಿಯಮಗಳು 1958, ಕರ್ನಾಟಕ ಸಿವಿಲ್ ಸೇವೆ (ಸಿಸಿಎ) ನಿಯಮಗಳು1957, ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು 1966ರಡಿಯಲ್ಲಿನ ನಿಯಮ ತಿದ್ದುಪಡಿಗಳು ಆದೇಶಗಳು ಅನುಮತಿ ಪ್ರಾಧಿಕಾರಿಗಳ ಸಂಬಂಧದ ಆದೇಶಗಳು ಹಾಗೂ ಆಗಿಂದಾಗ್ಗೆ ಹೊರಡಿಸುವ ಆದೇಶಗಳ ಪರಿಧಿಗೆ ಒಳಪಟ್ಟಂತೆ ಆನ್‌ಲೈನ್ ತಂತ್ರಾಂಶ ಸೃಜಿಸಲಾಗಿದೆ ಹಾಗೂ ಅನುಷ್ಠಾನಗೊಳಿಸಲಾಗಿದೆ.

ಈ ಎಲ್ಲಾ ಸೌಲಭ್ಯಗಳನ್ನು ದಿನಾಂಕ:01/05/2019 ರಿಂದ ಜಾರಿಗೆ ಬರುವಂತೆ ಆನ್‌ಲೈನ್ ನಿರ್ವಹಿಸಿ ಇತ್ಯರ್ಥಪಡಿಸುವುದು ಕಡ್ಡಾಯವಾಗಿರುತ್ತದೆ. ತಂತ್ರಾಂಶದಲ್ಲಿ ಮಾಹಿತಿ ಅಪ್-ಲೋಡ್ ಮಾಡುವ/ಅನುಮತಿ ನೀಡುವ ಅಧಿಕಾರಿಗಳ ಡಿಜಿಟಲ್ ಸಹಿ ಅಳವಡಿಕೆಯಾಗುವವರೆಗೆ ಅಧಿಕಾರಿಗಳೇ ಸ್ವತ: ಸಹಿ ಮಾಡಿ (manual) ಆನ್‌ಲೈನ್ ಮೂಲಕ ಸಲ್ಲಿಸಲು ತಿಳಿಸಿದೆ. ಈ ಬಗ್ಗೆ ಪ್ರಸ್ತಾಪಿತ ಆನ್-ಲೈನ್ ಸೇವೆಗಳಿಗೆ ಸಂಬಂಧಿಸಿದಂತೆ ಕೈಪಿಡಿಯನ್ನು ಮಾರ್ಗಸೂಚಿಗಳನ್ನು ಹಾಗೂ ಆದೇಶಗಳನ್ನು ಇಲಾಖೆಯ ವೆಬ್ ಸೈಟ್ ವಿಳಾಸ: http://www.sts.karnataka.gov.in ರಲ್ಲಿ ಪ್ರಕಟಿಸಲಾಗಿದೆ.

(ಡಾ. ಪಿ.ಸಿ.ಜಾಫರ್ )
**ಆಯುಕ್ತರು**

**ಇವರಿಗೆ:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ಇವರಿಗೆ ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಡಳಿತ ಮತ್ತು ಸುಧಾರಣೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. ಗೌರವಗಳೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು. ಇವರ ಮಾಹಿತಿಗಾಗಿ
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲ್ಬುರ್ಗಿ ಅಗತ್ಯ ಕ್ರಮಕ್ಕಾಗಿ
5. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ನಿರ್ದೇಶಕರುಗಳು.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳು.
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು.
8. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು (ಆಡಳಿತ) ಮತ್ತು ಉಪ ನಿರ್ದೇಶಕರುಗಳು (ಅಭಿವೃದ್ಧಿ).
9. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.
10. ಆಯುಕ್ತರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ
11. ಕಛೇರಿ ಪ್ರತಿ.

(15)

**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-1.**

**ಸಂಖ್ಯೆ: ಸಿ1(3)/ರ.ಮಂ.ಅ-102/2018-19** **ದಿನಾಂಕ: 21/01/2019**

**-:ಅಧಿಕೃತ ಜ್ಞಾಪನ:-**

**ವಿಷಯ:-** ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ವಿವಿಧ ರಜೆ ಪಡೆಯಲು ಅನುಮತಿಗಾಗಿ ಪ್ರಸ್ತಾವನೆಯನ್ನು ಆನ್‌ಲೈನ್ ತಂತ್ರಾಂಶದ ಮುಖಾಂತರ ಸಲ್ಲಿಸುವ ಬಗ್ಗೆ.

**ಉಲ್ಲೇಖ:-** ಕರ್ನಾಟಕ ಸಿವಿಲ್ ಸೇವಾ ನಿಯಮಗಳು-1958ರ ರಜಾ ನಿಯಮಗಳು 106 ರಿಂದ 206.

***************

ಸಾರ್ವಜನಿಕ ಶಿಕ್ಷಣ ಇಲಾಖೆಯ ಅತ್ಯಂತ ಮಹತ್ವದ ಹಾಗೂ ವಿಸ್ತಾರವಾದ ಇಲಾಖೆಯಾಗಿದ್ದು, ಇದರ ಅಡಿಯಲ್ಲಿ ಬರುವ ಗ್ರೂಪ್-ಎ ಮತ್ತು ಬಿ ಅಧಿಕಾರಿಗಳು ಹಾಗೂ ಬೋಧಕ/ಬೋಧಕೇತರ ವೃಂದದ ಸಿಬ್ಬಂದಿಯ ಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿದೆ. ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ವಿವಿಧ ರಜಾ ಸೌಲಭ್ಯಗಳನ್ನು ಪಡೆಯಲು ಮನವಿಗಳನ್ನು ಶಿಫಾರಸ್ಸು/ಅನುಮೋದನೆ ಪ್ರಾಧಿಕಾರಿಗಳಿಗೆ ಸಲ್ಲಿಸುತ್ತಿದ್ದು, ಈ ಸೌಲಭ್ಯವನ್ನು ಸಕಾಲದಲ್ಲಿ ಒದಗಿಸಬೇಕಾಗಿದೆ. ಈ ಪ್ರಕ್ರಿಯೆಯನ್ನು ಸರಳೀಕರಿಸಲು ಹಾಗೂ ತ್ವರಿತಗೊಳಿಸಲು ಆನ್‌ಲೈನ್ ಮುಖಾಂತರ ರಜಾ ನಿರ್ವಹಣಾ ವ್ಯವಸ್ಥೆಯನ್ನು ಸಿದ್ದಪಡಿಸಿದ್ದು, ಇನ್ನು ಮುಂದೆ ಎಲ್ಲಾ ವರ್ಗದ ಅಧಿಕಾರಿಗಳು/ಸಿಬ್ಬಂದಿ ವರ್ಗದ ವಿವಿಧ ರಜಾ ಸೌಲಭ್ಯಗಳನ್ನು ಪಡೆಯಲು ಆನ್‌ಲೈನ್ ಮುಖಾಂತರ ವ್ಯವಹರಿಸಬೇಕಾಗಿದೆ.

ಎಲ್ಲಾ ವಿದಧ ರಜಾ ಸೌಲಭ್ಯಗಳನ್ನು ಪಡೆಯಲು ಇಲಾಖೆಯ ಸಿಬ್ಬಂದಿ/ಅಧಿಕಾರಿಗಳ ರಜಾ ಅನುಮತಿಗಾಗಿ ಪ್ರಸ್ತಾವನೆಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಅನುವಾಗುವಂತೆ ಹಾಗೂ ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ಆಗಿದಾಂಗ್ಗೆ ಹೊರಡಿಸುವ ಈ ಕಛೇರಿಯ ಸುತ್ತೋಲೆ/ಸರ್ಕಾರದ ಆದೇಶಗಳಿಗೆ ಅನುಸಾರವಾಗಿ ಶಿಫಾರಸ್ಸು ಮಾಡುವ/ಅನುಮತಿಯನ್ನು ನೀಡುವ ಪ್ರಾಧಿಕಾರಿಗಳು ಶಿಫಾರಸ್ಸು/ಅನುಮತಿಯನ್ನು ದಿನಾಂಕ: 1/2/2019ರಿಂದ ಆನ್‌ಲೈನ್ ಮುಖಾಂತರವೇ ನಿರ್ವಹಿಸಬೇಕೆಂದು ಆದೇಶಿಸಿದೆ.

ವಿವಿಧ ರಜಾ ನಿರ್ವಾಹಣಾ ಆನ್‌ಲೈನ್ ವ್ಯವಸ್ಥೆಯ ಪೂರ್ಣ ಮಾಹಿತಿಯನ್ನು ಇಲಾಖೆಯ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ.

[ಡಾ|| ಪಿ.ಸಿ.ಜಾಫರ್]
ಆಯುಕ್ತರು

**ಇವರಿಗೆ:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ರವರಿಗೆ ಗೌರವಗಳೊಂದಿಗೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಡಳಿತ ಮತ್ತು ಸುಧಾರಣೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ನಿರ್ದೇಶಕರುಗಳು.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳು.
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು.
8. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು (ಆಡಳಿತ) ಮತ್ತು ಉಪ ನಿರ್ದೇಶಕರುಗಳು (ಅಭಿವೃದ್ಧಿ).
9. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.
10. ಆಯುಕ್ತರ ಆಪ್ತ ಕಾರ್ಯದರ್ಶಿಯವರು. 11. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ / ಸಿಬ್ಬಂದಿ ವರ್ಗದವರು ಪಾಸ್‌ಪೋರ್ಟ್ ಪಡೆಯಲು / ನವೀಕರಿಸಲು ಹಾಗೂ ವಿದೇಶ ಪ್ರವಾಸಕ್ಕೆಗೊಳ್ಳಲು ಅನುಮತಿಗಾಗಿ ಪ್ರಸ್ತಾವನೆಗಳನ್ನು ಆನ್‌ಲೈನ್ ತಂತ್ರಾಂಶದ ಮುಖಾಂತರ ಸಲ್ಲಿಸುವ ಬಗ್ಗೆ.

**ಓದಲಾಗಿದೆ:-** (1) ಅಧಿಕೃತ ಜ್ಞಾಪನಾ ಸಂಖ್ಯೆ:ಡಿಪಿಎಆರ್ 108 ಕೆಎಂಎಂ 83, ದಿನಾಂಕ:08-07-1983.

(2) ಸ ಆ.ಸಂಖ್ಯೆ:ಇಡಿ 133 ಇ.ಎಸ್.ಡಬ್ಲೂ. 2008. ದಿನಾಂಕ:9.04.2008.

(3) ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ಇವರ ಏಕ ಕಡತದ ಪ್ರಸ್ತಾವನೆ ಸಂಖ್ಯೆ:ಸಿ1(1) ಅ.ತಂ.ಅ:03:2018-19, ದಿ:16/11/2018.

(4) ಸರ್ಕಾರಿ ಆದೇಶ ಸಂಖ್ಯೆ: ಇಡಿ 2 ಡಿಎಆರ್ 2019 ದಿನಾಂಕ:07.01.2019

(5) ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಸಿ(1) ಪಾ.ನ03/1/2018-19, ದಿನಾಂಕ:09/01/2019.

******

ಮೇಲೆ ಓದಲಾದ ಕ್ರಮ ಸಂಖ್ಯೆ:(3)ರ ಏಕ ಕಡತದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯು ಅತ್ಯಂತ ಮಹತ್ವದ ಹಾಗೂ ವಿಸ್ತಾರವಾದ ಇಲಾಖೆಯಾಗಿದ್ದು, ಇದರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ/ಗ್ರೂಪ್ ಎ ಮತ್ತು ಬಿ ವೃಂದದ ಅಧಿಕಾರಿಗಳು, ಪ್ರಾಥಮಿಕ, ಪ್ರೌಢಶಾಲಾ ಶಿಕ್ಷಕರು, ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಪ್ರಾಂಶುಪಾಲರು, ಬೋಧಕ ವೃಂದದ ಉಪನ್ಯಾಸಕರು ಹಾಗೂ ಬೋಧಕೇತರ ವೃಂದದ ಸಿಬ್ಬಂದಿಯವರ ಸಂಖ್ಯೆಯು ದೊಡ್ಡ ಪ್ರಮಾಣದಲ್ಲಿದ್ದು ಪಾಸ್‌ಪೋರ್ಟ್ ಪಡೆಯಲು/ ನವೀಕರಿಸಲು ನಿರಾಕ್ಷೇಪಣಾ ಪತ್ರ ಕೋರುವ ಮನವಿ ಹಾಗೂ ವಿದೇಶ ಪ್ರವಾಸಕ್ಕೆಗೊಳ್ಳಲು ಅನುಮತಿಗಾಗಿ ಸಲ್ಲಿಸುವ ಅರ್ಜಿಗಳ ಬಗ್ಗೆ ಸಕಾಲದಲ್ಲಿ ಒದಗಿಸುವುದು ಕಷ್ಟಸಾಧ್ಯವಾಗಿದೆ. ಈ ಪ್ರಕ್ರಿಯೆಯನ್ನು ಸುಲಭಗೊಳಿಸಲು ಹಾಗೂ ತ್ವರಿತಗೊಳಿಸಲು ಆನ್‌ಲೈನ್‌ನಲ್ಲಿ ಸೇವೆಗಳನ್ನು ಸೃಜಿಸಿ ನಿರ್ವಹಿಸಲು ಇಲಾಖೆಯು ಇಚ್ಛಿಸಿದ್ದು, ಅದರಂತೆ ಅನುಬಂಧದಲ್ಲಿ ನಮೂದಿಸಿರುವಂತೆ ವರದಿ ಮಾಡುವ ಹಾಗೂ ಅನುಮತಿ ನೀಡುವ ಪ್ರಾಧಿಕಾರಿಗಳನ್ನು ಗುರ್ತಿಸಿ ಆದೇಶ ಹೊರಡಿಸುವಂತೆ ಕೋರಿದ್ದರು. ಅದರಂತೆ, ಮೇಲೆ ಓದಲಾದ ಕ್ರಮ ಸಂಖ್ಯೆ:4ರ ಸರ್ಕಾರಿ ಆದೇಶದನ್ವಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ / ಸಿಬ್ಬಂದಿ ವರ್ಗದವರು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿ / ಸಿಬ್ಬಂದಿವರ್ಗದವರು ಪಾಸ್‌ಪೋರ್ಟ್ ಪಡೆಯಲು / ನವೀಕರಿಸಲು ಹಾಗೂ ವಿದೇಶ ಪ್ರವಾಸಕ್ಕೆಗೊಳ್ಳಲು ಅನುಮತಿಗಾಗಿ ಪ್ರಸ್ತಾವನೆಗಳನ್ನು ನಿಗಧಿತ ತಾಳೆಪಟ್ಟಿಯಲ್ಲಿ ಆನ್‌ಲೈನ್ ತಂತ್ರಾಂಶದ ಮುಖಾಂತರ ಸಲ್ಲಿಸಲು ಅನುವಾಗುವಂತೆ ವರದಿ ಮಾಡುವ ಪ್ರಾಧಿಕಾರಿ ಹಾಗೂ ಅನುಮತಿ ನೀಡುವ ಪ್ರಾಧಿಕಾರಿಗಳನ್ನು ಅನುಬಂಧ-1 ಮತ್ತು 2ರಲ್ಲಿ ನಮೂದಿಸಿರುವಂತೆ ನಿಗಧಿಪಡಿಸಿ ಆದೇಶ ಹೊರಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ:(5)ರ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ / ಸಿಬ್ಬಂದಿ ವರ್ಗದವರು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿ / ಸಿಬ್ಬಂದಿಯವರು ಪಾಸ್‌ಪೋರ್ಟ್ ಪಡೆಯಲು / ನವೀಕರಿಸಲು ಹಾಗೂ ವಿದೇಶ ಪ್ರವಾಸಕ್ಕೆಗೊಳ್ಳಲು ಅನುಮತಿಗಾಗಿ ಆನ್‌ಲೈನ್ ತಂತ್ರಾಂಶದ ಮೂಲಕ ಅನುಮತಿ ನೀಡುವ ಸಂಬಂಧ ಹೊರಡಿಸಲಾದ ಸರ್ಕಾರಿ ಆದೇಶ ಸಂಖ್ಯೆ:ಇಡಿ 2 ಡಿಎಆರ್ 2019, ದಿನಾಂಕ:07/01/2019ರಲ್ಲಿ ಕೆಲವೊಂದು ತಿದ್ದುಪಡಿ/ಸೇರ್ಪಡೆ ಆಗಬೇಕಾಗಿರುವುದರಿಂದ ತಿದ್ದುಪಡಿ ಮಾಡಬೇಕಾದ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತಾ, ಪರಿಷ್ಕೃತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 02 ಡಿಎಆರ್ 2019, ದಿನಾಂಕ:07/01/2019ನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು ಪರಿಷ್ಕರಿಸಿ ಆದೇಶ ಹೊರಡಿಸಲು ನಿರ್ಧರಿಸಿದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ:ಇಡಿ 02 ಡಿಎಆರ್ 2019, ದಿನಾಂಕ:06/02/2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 02 ಡಿಎಆರ್ 2019, ದಿನಾಂಕ:07/01/2019ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ / ಸಿಬ್ಬಂದಿ ವರ್ಗದವರು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿ /ಸಿಬ್ಬಂದಿಯವರು ಪಾಸ್‌ಪೋರ್ಟ್ ಪಡೆಯಲು /ನವೀಕರಿಸಲು ಹಾಗೂ ವಿದೇಶ ಪ್ರವಾಸಕೈಗೊಳ್ಳಲು ಅನುಮತಿಗಾಗಿ ಪ್ರಸ್ತಾವನೆಗಳನ್ನು ನಿಗಧಿತ ತಾಳೆಪಟ್ಟಿಯಲ್ಲಿ ಆನ್‌ಲೈನ್ ತಂತ್ರಾಂಶದ ಮುಖಾಂತರ ಸಲ್ಲಿಸಲು ಅನುವಾಗುವಂತೆ ವರದಿ ಮಾಡುವ ಪ್ರಾಧಿಕಾರಿ ಹಾಗೂ ಅನುಮತಿ ನೀಡುವ ಪ್ರಾಧಿಕಾರಿಗಳನ್ನು ಪರಿಷ್ಕರಿಸಿ, ಅನುಬಂಧ-1 ಮತ್ತು 2ರಲ್ಲಿ ನಮೂದಿಸಿರುವಂತೆ ನಿಗಧಿಪಡಿಸಿ ಆದೇಶಿಸಿದೆ.

***ಆನ್‌ಲೈನ್‌ನಲ್ಲಿ ನಿರ್ವಹಿಸುವ ಹಂತಗಳು ಈ ಕೆಳಗಿನಂತೆ ಇರತಕ್ಕದ್ದು.***

(1) ಅರ್ಜಿದಾರರು ಅರ್ಜಿ ನೋಂದಣಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು.

(2) ಶಿಫಾರಸ್ಸು ಮಾಡುವ ಅಧಿಕಾರಿಯು ಆನ್‌ಲೈನ್‌ನಲ್ಲೇ ಶಿಫಾರಸ್ಸು ಮಾಡತಕ್ಕದ್ದು.

(3) ಅನುಮತಿ ನೀಡುವ ಪ್ರಾಧಿಕಾರವು ಆನ್‌ಲೈನ್‌ನಲ್ಲಿಯೇ ಅನುಮತಿ ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ.ಡಿ. ನಾಗೇಂದ್ರ)**
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ(ಆಡಳಿತ)

**ಇವರಿಗೆ:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
4. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ / ಧಾರವಾಡ.
6. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., 100 ಅಡಿ ವರ್ತುಲ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು.
7. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
8. ಜಂಟಿ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸಂಘ, ಡಿ.ಎಸ್.ಇ.ಆರ್.ಟಿ., 100 ಅಡಿ ವರ್ತುಲ ರಸ್ತೆ, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂಗಳೂರು.
10. ಪ್ರಾಂಶುಪಾಲರು ಹಾಗೂ ಸಹ ನಿರ್ದೇಶಕರು, ಸಿ.ಟಿ.ಇ., ಮೈಸೂರು /ಕಲಬುರ್ಗಿ / ಜಮಖಂಡಿ, ಬಾಗಲಕೋಟೆ ಜಿಲ್ಲೆ / ಚಿತ್ರದುರ್ಗ/ಮಂಗಳೂರು.
    ಎಲ್ಲಾ ಜಂಟಿ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
11. ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ.
12. ಎಲ್ಲಾ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು(ಅಭಿವೃದ್ಧಿ), ಡಯಟ್.
13. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ.

(ಆಯುಕ್ತರು, ಸಾ.ಶಿ.ಇ. ಬೆಂಗಳೂರು ಇವರ ಮುಖಾಂತರ)

**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ:ಸಿ2(2)ಸಿ.ಸಿ.ಎ/ಸು-1/2018-19 ದಿನಾಂಕ:14-02-2019

**ಅಧಿಕೃತ ಜ್ಞಾಪನಾ**

ವಿಷಯ: ಇಲಾಖಾ ಶಿಸ್ತು ಪ್ರಕರಣಗಳನ್ನು ಆನ್-ಲೈನ್ ಮೂಲಕ ತಂತ್ರಾಂಶದಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ: 1.ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ,ನಿಯಂತ್ರಣ ಮತ್ತು ಅಪೀಲು) ನಿಯಮಗಳು-1957.

2.ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966

3.ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಇವಿ 2018 ದಿನಾಂಕ:15/02/2018 ಮತ್ತು 27.02.2018.

4.ತತ್ಸಬಂಧ ಸರ್ಕಾರದಿಂದ ಹೊರಡಿಸಲಾಗುವ ಅಧಿಸೂಚನೆ/ಆದೇಶಗಳು.

-----

ಸಾರ್ವಜನಿಕ ಶಿಕ್ಷಣ ಇಲಾಖೆಯು ಅತ್ಯಂತ ಮಹತ್ವದ ಇಲಾಖೆಯಾಗಿರುತ್ತದೆ. ಈ ಇಲಾಖೆಯಲ್ಲಿ ಎಲ್ಲಾ ವೃಂದದ ಅಧಿಕಾರಿಗಳು ಮತ್ತು ಭೋಧಕ/ಭೋಧಕೇತರರ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ವೇದ್ಯ. ಇವರುಗಳ ಮೇಲಿನ ಶಿಸ್ತು ಪ್ರಕರಣಗಳನ್ನು ನಿಗಧಿಪಡಿಸಿದ ಅವಧಿಯೊಳಗೆ ತ್ವರಿತಗತಿಯಲ್ಲಿ ಇತ್ಯರ್ಥಪಡಿಸುವ ಹಿನ್ನೆಲೆಯಲ್ಲಿ, ಇಲಾಖಾ ಶಿಸ್ತು ಪ್ರಕರಣಗಳನ್ನು ಆನ್-ಲೈನ್ ಮೂಲಕ ತಂತ್ರಾಂಶದಲ್ಲಿ ಇಂದೀಕರಿಸಿ ನಿರ್ವಹಿಸಲು ಇಲಾಖೆಯು ಉದ್ದೇಶಿಸಿರುತ್ತದೆ. ತತ್ಸಂಬಂಧ ತಂತ್ರಾಂಶವನ್ನು ಇಲಾಖೆಯ ವೆಬ್ ಸೈಟ್: http://www.sts.karnataka.gov.in ರಲ್ಲಿ ಅಳವಡಿಸಿರುತ್ತದೆ.

ಈ ಸಂಬಂಧ ತಂತ್ರಾಂಶದ ಬಳಕೆ ಬಗ್ಗೆ ಕೈಪಿಡಿಯನ್ನು / ಮಾರ್ಗಸೂಚಿಗಳನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುತ್ತದೆ. ಕೈಪಿಡಿ / ಮಾರ್ಗಸೂಚಿಯಲ್ಲಿ ವಿವರಿಸಿದಂತೆ ಇಲಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಭೋಧಕ/ಭೋಧಕೇತರರ ನೌಕರರು ದೂರುಗಳು ಮತ್ತು ಇಲಾಖಾ ಶಿಸ್ತು ಪ್ರಕರಣಗಳನ್ನು ತಂತ್ರಾಂಶದಲ್ಲಿ ಇಂದೀಕರಿಸಿ (update) ನಿರ್ವಹಿಸುವುದು ಕಡ್ಡಾಯವಾಗಿರುತ್ತದೆ.

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ,ನಿಯಂತ್ರಣ ಮತ್ತು ಅಪೀಲು) ನಿಯಮಗಳು-1957 , ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ಮತ್ತು ತತ್ಸಂಬಂಧ ಸರ್ಕಾರದಿಂದ ಹೊರಡಿಸುವ ಆದೇಶ/ ಸುತ್ತೋಲೆಗಳಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವೃಂದದ ಅಧಿಕಾರಿಗಳು ಮತ್ತು ಭೋಧಕ/ಭೋಧಕೇತರರ ನೌಕರರ ಇಲಾಖಾ ಶಿಸ್ತು ಪ್ರಕರಣಗಳು ಮತ್ತು ದೂರುಗಳನ್ನು ಆನ್-ಲೈನ್ ಮುಖಾಂತರ ಇಲಾಖೆಯ ವೆಬ್ ಸೈಟ್: http://www.sts.karnataka.gov.in ರಲ್ಲಿ ಅಳವಡಿಸಿರುವ ತಂತ್ರಾಂಶದಲ್ಲಿ ನಿಯಮಾನುಸಾರ ಇಂದೀಕರಿಸಿ (update) ನಿರ್ವಹಿಸುವುದನ್ನು ಕಡ್ಡಾಯಗೊಳಿಸಿದೆ. ಹಾಗೂ ತಂತ್ರಾಂಶದಲ್ಲಿ ಅಳವಡಿಸಿದ ಪ್ರಕರಣಗಳನ್ನು ತಂತ್ರಾಂಶದಲ್ಲಿಯೇ ಆನ್-ಲೈನ್ ಮೂಲಕವೇ ವ್ಯವಹರಿಸುವಂತೆ ಸೂಚಿಸಿದೆ.

**[ಡಾ||ಪಿ.ಸಿ.ಜಾಫರ್]**
**ಆಯುಕ್ತರು**

ಇವರಿಗೆ,

1.ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು-01 ರವರಿಗೆ.

2.ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರುಗಿ ವಿಭಾಗ ರವರಿಗೆ.

3.ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ವಿಭಾಗ ರವರಿಗೆ.

**(ಪುಟ...2ಕ್ಕೆ)**

ಇವರಿಗೆ,

3.ಎಲ್ಲಾ ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ.

4.ಎಲ್ಲಾ ಸಹ ನಿರ್ದೇಶಕರು / ಪ್ರಾಂಶುಪಾಲರು(ಸಿ.ಟಿ.ಇ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ.

5.ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ.

6.ಎಲ್ಲಾ ಉಪನಿರ್ದೇಶಕರು (ಅಭಿವೃದ್ದಿ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ.

7.ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ.

**ಪ್ರತಿಯನ್ನು:-**

1.ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ವಂದನಾಪೂರ್ವಕವಾಗಿ ಸಲ್ಲಿಸಿದೆ.

2.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ವಂದನಾಪೂರ್ವಕವಾಗಿ ಸಲ್ಲಿಸಿದೆ.

3.ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ವಂದನಾಪೂರ್ವಕವಾಗಿ ಸಲ್ಲಿಸಿದೆ.

4.ಮಾನ್ಯ ಆಯುಕ್ತರ ಆಪ್ತ ಶಾಖೆಗೆ.

5.ಕಛೇರಿ ಪ್ರತಿ.

*************

**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-1.**

**ಸಂಖ್ಯೆ: ಸಿ1(7)/ಪ್ರ.ಭ.ಮಂ-137/2018-19** **ದಿನಾಂಕ: 30/03/2019**

**-:ಅಧಿಕೃತ ಜ್ಞಾಪನ:-**

**ವಿಷಯ:-** ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಪ್ರಭಾರ ಭತ್ಯೆ ಪಡೆಯಲು ಅನುಮತಿಗಾಗಿ ಪ್ರಸ್ತಾವನೆಯನ್ನು ಆನ್‌ಲೈನ್ ತಂತ್ರಾಂಶದ ಮುಖಾಂತರ ಸಲ್ಲಿಸುವ ಬಗ್ಗೆ.

**ಉಲ್ಲೇಖ:-** ಕರ್ನಾಟಕ ಸಿವಿಲ್ ಸೇವಾ ನಿಯಮಗಳು-1958ರ ನಿಯಮ-32 ಹಾಗೂ 68 ಪರಿಶಿಷ್ಟದಲ್ಲಿರುವ ಷರತ್ತುಗಳು.

***************

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಎ ಮತ್ತು ಬಿ ಅಧಿಕಾರಿಗಳು ಹಾಗೂ ಬೋಧಕ/ಬೋಧಕೇತರ ವೃಂದದ ನಿಯಮ 32 ಹಾಗೂ 68ರ ಪ್ರಭಾರ ಭತ್ಯೆ ಮಂಜೂರಾತಿ ಸೌಲಭ್ಯವನ್ನು ಸಕಾಲದಲ್ಲಿ ಒದಗಿಸುವುದು ಇಲಾಖಾ ಕರ್ತವ್ಯವಾಗಿರುತ್ತದೆ. ಈ ಪ್ರಕ್ರಿಯೆ ಸರಳೀಕರಿಸಲು ಹಾಗೂ ತ್ವರಿತಗೊಳಿಸಲು ಆನ್‌ಲೈನ್ ಮುಖಾಂತರ ಮಂಜೂರು ಮಾಡಲು ನಿರ್ವಹಣಾ ವ್ಯವಸ್ಥೆಯನ್ನು ಸಿದ್ಧಪಡಿಸಿದ್ದು, ಇನ್ನು ಮುಂದೆ ಎಲ್ಲಾ ವರ್ಗದ ಅಧಿಕಾರಿಗಳು/ಸಿಬ್ಬಂದಿ ವರ್ಗದ ಪ್ರಭಾರ ಭತ್ಯೆ ಮಂಜೂರಾತಿ ಪಡೆಯಲು ಆನ್‌ಲೈನ್ ಮುಖಾಂತರ ವ್ಯವಹರಿಸಬೇಕಾಗಿದೆ.

ಅಧಿಕಾರಿಗಳು/ಬೋಧಕರು ತಮ್ಮ ಕಾರ್ಯ ವ್ಯಾಪ್ತಿಗೆ ಸೀಮಿತವಾಗಿರುವ ಪ್ರಭಾರ ಭತ್ಯೆ ಮಂಜೂರಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ, ಇಲಾಖೆಯ ಸಿಬ್ಬಂದಿ/ಅಧಿಕಾರಿಗಳು ನಿಯಮ-32 ಮತ್ತು 68 ರಡಿಯಲ್ಲಿ ಪ್ರಭಾರ ಭತ್ಯೆ ಮಂಜೂರಾತಿಗಾಗಿ ಪ್ರಸ್ತಾವನೆಗಳನ್ನು ಆನ್ ಲೈನ್ ಮುಖಾಂತರ ಸಲ್ಲಿಸಲು ಅನುವಾಗುವಂತೆ ಹಾಗೂ ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ಪ್ರಭಾರ ಭತ್ಯೆಯ ಮಂಜೂರಾತಿಗಾಗಿ ಹೊರಡಿಸುವ ಸುತ್ತೋಲೆ/ಸರ್ಕಾರದ ಆದೇಶಗಳ ಷರತ್ತುಗಳ ಅನುಸಾರವಾಗಿ ಶಿಫಾರಸ್ಸು ಮಾಡುವ/ಅನುಮತಿ ನೀಡುವ ಪ್ರಾಧಿಕಾರಿಗಳು ದಿನಾಂಕ: 1/5/2019 ರಿಂದ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರವೇ ನಿರ್ವಹಿಸಲು ಆದೇಶಿಸಿದೆ.

ಪ್ರಭಾರ ಭತ್ಯೆ ಮಂಜೂರಾತಿ ಮಾಡುವ ಸಂಬಂಧ, ಶಿಫಾರಸ್ಸು ಮಾಡುವ ಪ್ರಾಧಿಕಾರ ಟಿಡಿಎಸ್ ನಲ್ಲಿನ ಮಾಹಿತಿಯಂತೆ, ನೌಕರರ ಹೆಸರು, ಸೇವಾ ವಿವರ, ನಿಯಮ-32ರಡಿಯಲ್ಲಿ ಸ್ಥಾನಪನ್ನದ ಬಗ್ಗೆ ಮಾಹಿತಿ ಅಥವಾ ನಿಯಮ-68ರಡಿಯಲ್ಲಿ ಆದೇಶದ ಪ್ರತಿ, ಪದಗ್ರಾಹಿ ಮತ್ತು ಪದಮುಕ್ತದ ಬಗ್ಗೆ ಮಾಹಿತಿ, ಸಲ್ಲಿಸಿರುವ ಮನವಿ ಪತ್ರಗಳನ್ನು ಪರಿಶೀಲಿಸಿ ಅನುಮೋದನೆ ಪ್ರಾಧಿಕಾರಕ್ಕೆ ಸಲ್ಲಿಸುವುದು.

ಅನುಮೋದನೆ ಪ್ರಾಧಿಕಾರ ಮೇಲ್ಕಂಡ ಅಂಶವನ್ನು ಪರಿಶೀಲಿಸಿ ಅನುಮತಿ/ತಿರಸ್ಕರಿಸುವ ಬಗ್ಗೆ ಶಿಫಾರಸ್ಸು ಮಾಡುವ ಪ್ರಾಧಿಕಾರ ಮತ್ತು ಅರ್ಜಿದಾರರಿಗೆ ತಿಳಿಸುವ ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ, ಟಿಡಿಎಸ್ ನಲ್ಲಿ ಇರುವ ಮಾಹಿತಿಯನ್ನು ಅಪ್ ಲೋಡ್ ಮಾಡಲು ಮತ್ತು ಹೆಚ್ಚುವರಿ ಮಾಹಿತಿ ಕೇಳುವ ಮತ್ತು ಅರ್ಜಿದಾರರು ಹೆಚ್ಚುವರಿ ಮಾಹಿತಿಯನ್ನು ಕಳುಹಿಸುವ ವ್ಯವಸ್ಥೆಯನ್ನು ಹಾಗೂ ಅನುಮತಿ ಪತ್ರವನ್ನು ನೇರವಾಗಿ ಅರ್ಜಿದಾರರು ಪಡೆದುಕೊಳ್ಳುವ ವ್ಯವಸ್ಥೆಯನ್ನು ಸಹಾ ಆನ್‌ಲೈನ್ ನಲ್ಲಿ ಅಳವಡಿಸಲಾಗಿದೆ. ಪ್ರಭಾರ ಭತ್ಯೆ ಮಂಜೂರು ಮಾಡಲು ನಿರ್ವಹಣಾ ಆನ್‌ಲೈನ್ ವ್ಯವಸ್ಥೆಯ ಪೂರ್ಣ ಮಾಹಿತಿಯನ್ನು ಇಲಾಖೆಯ ವೈಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ.

30/3/2019

[ಡಾ॥ ಪಿ.ಸಿ.ಜಾಫರ್]
ಆಯುಕ್ತರು

**ಇವರಿಗೆ:**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ನಿರ್ದೇಶಕರುಗಳು.

3. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು (ಆಡಳಿತ) ಮತ್ತು ಉಪ ನಿರ್ದೇಶಕರುಗಳು (ಅಭಿವೃದ್ಧಿ).
6. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.

**ಪ್ರತಿಯನ್ನು:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ರವರಿಗೆ ಗೌರವಗಳೊಂದಿಗೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಡಳಿತ ಮತ್ತು ಸುಧಾರಣೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.

ಕರ್ನಾಟಕ ಸರ್ಕಾರ

ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-1.

ಸಂಖ್ಯೆ: ಸಿ1(1)(2)ಪ್ರ.ದಿ.ಅ01/2018-19 ದಿನಾಂಕ: 30/03/2019

-:ಅಧಿಕೃತ ಜ್ಞಾಪನ:-

**ವಿಷಯ:-** ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಎ ಮತ್ತು ಗ್ರೂಪ್-ಬಿ ವೃಂದದ ಅಧಿಕಾರಿಗಳ ಪ್ರವಾಸ ದಿನಚರಿ ನಿರ್ವಹಣೆ ಅನುಮೋದನೆಗೆ ಸಂಬಂಧಿಸಿದಂತೆ ಆನ್ ಲೈನ್ ತಂತ್ರಾಂಶದಲ್ಲಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:** ಈ ಕಛೇರಿ ಜ್ಞಾಪನಾ ಸಂಖ್ಯೆ: ಸಿ2(2) ಸಿಬ್ಬಂದಿ 1ಎ ಶಾಖೆ ಇತರೆ/2018-19 ದಿ 25/3/2019

***************

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಗ್ರೂಪ್-ಎ ಮತ್ತು ಗ್ರೂಪ್-ಬಿ ಅಧಿಕಾರಿಗಳ ಕಾರ್ಯನಿರ್ವಹಣೆಯ ಪ್ರಮುಖ ಭಾಗ ಶೈಕ್ಷಣಿಕ ಮೇಲ್ವಿಚಾರಣೆಯಾಗಿದ್ದು, ಶಾಲೆಗಳು, ಶಿಕ್ಷಕರ ತರಬೇತಿ ಕೇಂದ್ರಗಳು ಮತ್ತು ಇವರ ಪ್ರಮುಖ ಕಾರ್ಯಕ್ರಮಗಳ ಮೇಲುಸ್ತುವಾರಿಗಾಗಿ ಪ್ರವಾಸ ಕೈಗೊಳ್ಳಬೇಕಾಗಿದೆ. ಪ್ರತಿ ಮಾಹೆಯ 28 ರೊಳಗೆ ಪ್ರವಾಸಪಟ್ಟಿ ತಯಾರಿಸಿ ಅನುಮೊದನೆ ಪ್ರಾಧಿಕಾರದಿಂದ ಅನುಮೊದನೆ ಪಡೆದುಕೊಳ್ಳುವುದು. ಪ್ರತಿ ಮಾಹೆಯ ಪ್ರವಾಸದ ದಿನಚರಿಯನ್ನು ದಾಖಲೆಗಳೊಂದಿಗೆ ನಿಯಂತ್ರಣಾಧಿಕಾರಿಗಳಿಗೆ ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಸಲ್ಲಿಸುವುದು ಅವಶ್ಯಕತೆಯಾಗಿರುತ್ತದೆ. ದಿನಚರಿ ವಿವರ ಸಂಬಂಧಿಸಿದ ಅಧಿಕಾರಿಗೆ ಮತ್ತು ಫಲಾನುಭವಿಗಳಿಗೆ ಹಾಗೂ ನಿಯಂತ್ರಣಾಧಿಕಾರಿ ಮತ್ತು ರಾಜ್ಯ/ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾಹಿತಿ ಪಡೆಯಲು ಮತ್ತು ಅನುಪಾಲನೆಗಾಗಿ ಪ್ರವಾಸ ಪಟ್ಟಿ/ದಿನಚರಿಯನ್ನು ಆನ್‌ಲೈನ್ ವ್ಯವಸ್ಥೆಗೆ ಒಳಪಡಿಸಿರುವುದರಿಂದ ಅಧಿಕಾರಿಗಳ ಪ್ರವಾಸ ದಿನಚರಿ ನಿರ್ವಹಣೆ ಅನುಮೋದನೆಗೆ ಸಂಬಂದಿಸಿದ ಪ್ರಕ್ರಿಯೆ ಸರಳೀಕರಿಸಲು ಹಾಗೂ ತ್ವರಿತಗೊಳಿಸಲು ಆನ್ ಲೈನ್ ಮುಖಾಂತರ ವ್ಯವಹರಿಸಬೇಕಾಗಿರುತ್ತದೆ. ಅಧಿಕಾರಿಗಳು ಪ್ರವಾಸ ದಿನಚರಿ ನಿರ್ವಹಣೆ ಅನುಮೋದನೆಗೆ ಪ್ರಸ್ತಾವನೆಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಅನುವಾಗುವಂತೆ ದಿನಾಂಕ:01/05/2019ರಿಂದ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರವೇ ನಿರ್ವಹಿಸಲು ಆದೇಶಿಸಿದೆ. ಪ್ರಕ್ರಿಯೆಯನ್ನು ತಂತ್ರಾಂಶದ ಟಿ.ಡಿ.ಎಸ್ ಗೆ ಲಿಂಕ್ ಮಾಡಲಾಗಿದೆ.

ಅಧಿಕಾರಿಗಳ ಪ್ರವಾಸ ದಿನಚರಿ ನಿರ್ವಹಣೆ/ಅನುಮೋದನೆ ನಿರ್ವಹಣಾ ಆನ್‌ಲೈನ್ ವ್ಯವಸ್ಥೆಯ ಪೂರ್ಣ ಮಾಹಿತಿಯನ್ನು ಇಲಾಖೆಯ ವೈಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ.

[ಡಾ॥ ಪಿ.ಸಿ.ಜಾಫರ್]
ಆಯುಕ್ತರು

ಇವರಿಗೆ:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ರವರಿಗೆ ಗೌರವಗಳೊಂದಿಗೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಡಳಿತ ಮತ್ತು ಸುಧಾರಣೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ನಿರ್ದೇಶಕರುಗಳು.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳು.
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು.
8. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು (ಆಡಳಿತ) ಮತ್ತು ಉಪ ನಿರ್ದೇಶಕರುಗಳು (ಅಭಿವೃದ್ಧಿ).
9. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.
10. ಆಯುಕ್ತರ ಆಪ್ತ ಕಾರ್ಯದರ್ಶಿಯವರು.
11. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

*ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-1.*

**ಸಂಖ್ಯೆ: ಸಿ1(5)ಹೆ.ಸೇ.ಸೆ-53/2018-19** **ದಿನಾಂಕ:03.04.2019.**

**-:ಅಧಿಕೃತ ಜ್ಞಾಪನ:-**

**ವಿಷಯ:**-ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರಿಗೆ ಕೆ.ಸಿ.ಎಸ್. ನಿಯಮಗಳಡಿ ಹೆಚ್ಚುವರಿ ಸೇವಾ ಸೌಲಭ್ಯಗಳನ್ನು ಮಂಜೂರು ಮಾಡುವ ಪ್ರಸ್ತಾವನೆಯನ್ನು ಆನ್ ಲೈನ್ ತಂತ್ರಾಂಶದ ಮುಖಾಂತರ ಸಲ್ಲಿಸುವ ಬಗ್ಗೆ.

**ಉಲ್ಲೇಖ:**-1.ಕರ್ನಾಟಕ ಸಿವಿಲ್ ಸೇವಾ ನಿಯಮಗಳು-247ಎ/248ಎ/252ಬಿ/224ಎ ರನ್ವಯ ಮತ್ತು ತಿದ್ದುಪಡಿಗಳು

2.ಸರ್ಕಾರಿ ಆದೇಶ ಸಂಖ್ಯೆ.ಅಇ9 ಎಸ್‌ಆರ್‌ಎ 2012 ಬೆಂಗಳೂರು ದಿನಾಂಕ.08.09.2016 ಮತ್ತು 10.04.2017

3.ಸರ್ಕಾರದ ಆದೇಶ ಸಂಖ್ಯೆ.ಆಇ9 ಸನಿತಿ 2018 ದಿನಾಂಕ.05.11.2018

**********

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಎ ಮತ್ತು ಬಿ ಅಧಿಕಾರಿಗಳು ಹಾಗೂ ಬೋಧಕ/ಬೋಧಕೇತರ ವೃಂದದ ಸಿಬ್ಬಂದಿಯ ಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿದೆ. ಇಲಾಖೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು ಪ್ರೌಢಶಾಲಾ ಸಹ ಶಿಕ್ಷಕರ ಸಂಖ್ಯೆ ಹೆಚ್ಚಾಗಿದ್ದು ಪ್ರತಿ ವರ್ಷ ನಿವೃತ್ತಿಯಿಂದ ಖಾಲಿಯಾಗುವ ಹುದ್ದೆಗಳಿಗೆ ಸಿ.ಇ.ಟಿ ಮುಖಾಂತರ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತದೆ. ಅನುಕಂಪದ ಆಧಾರದ ಮೇಲೆ ಬೋಧಕೇತರ ಹುದ್ದೆ ಭರ್ತಿ ಮಾಡಲಾಗುತ್ತಿದೆ. ಸೇವಾ ನಿರತ ಮತ್ತು ನೇಮಕಾತಿಯಲ್ಲಿ ಹೆಚ್ಚಿನ ವಯೋಮಿತಿ ನಿಗಧಿ ಅವಕಾಶವಿರುತ್ತದೆ.

ಕರ್ನಾಟಕ ಸಿವಿಲ್ ಸೇವಾ ನಿಯಮಗಳು-247ಎ/248ಎ/252ಬಿ/224ಎ ರನ್ವಯ ಹಿಂದಿನ ಸೇವೆಯನ್ನು ಸೇರ್ಪಡೆ ಮಾಡಿ ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಲು ಹೆಚ್ಚುವರಿ ಸೇರ್ಪಡೆಗೆ ಪ್ರಸ್ತಾವನೆಗಳು ಅಧಿಕ ಸಂಖ್ಯೆಯಲ್ಲಿ ಸ್ವೀಕೃತವಾಗಿರುತ್ತವೆ. ಅನುಮತಿ ಪಡೆಯಲು ಸಕಾಲದಲ್ಲಿ ಮನವಿಗಳನ್ನು ಶಿಫಾರಸ್ಸಿನೊಂದಿಗೆ ಸಂಬಂಧಿಸಿದ ಪ್ರಾಧಿಕಾರಿಗಳಿಗೆ ಸಲ್ಲಿಕೆಯಾಗದೇ ಇರುವುದು ಹಾಗೂ ಈ ಪ್ರಕ್ರಿಯೆ ತ್ವರಿತವಾಗಿ ಪೂರ್ಣಗೊಳಿಸಲು ಸಾಧ್ಯವಾಗದೆ ಇರುವುದು ಕಂಡುಬಂದಿದೆ. ಈ ಪ್ರಕ್ರಿಯೆಯನ್ನು ಸರಳೀಕರಿಸಲು ಹಾಗೂ ತ್ವರಿತಗೊಳಿಸಲು ಆನ್‌ಲೈನ್ ಮುಖಾಂತರ ವಿವಿಧ ಸನ್ನಿವೇಶಗಳಲ್ಲಿನ ಸೇವೆಯನ್ನು ಈ ಪ್ರಸ್ತಾವನೆಗಳಿಗೆ ಹೆಚ್ಚುವರಿ ಸೇವೆ ಸೇರ್ಪಡೆ ಮಾಡುವ ವ್ಯವಸ್ಥೆಯನ್ನು ಇನ್ನು ಮುಂದೆ ಎಲ್ಲಾ ವರ್ಗದ ಅಧಿಕಾರಿಗಳು/ಸಿಬ್ಬಂದಿ ವರ್ಗದವರ ಕರ್ನಾಟಕ ಸಿವಿಲ್ ಸೇವಾ ನಿಯಮಗಳು-247ಎ/248ಎ/252ಬಿ/224ಎ ರನ್ವಯ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಲು ಆನ್‌ಲೈನ್ ಮುಖಾಂತರ ವ್ಯವಹರಿಸಬೇಕಾಗಿದೆ.

ಕರ್ನಾಟಕ ಸಿವಿಲ್ ಸೇವಾ ನಿಯಮಗಳು-247ಎ/248ಎ/252ಬಿ/224ಎ ರನ್ವಯ ಹಿಂದಿನ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಲು ಬೇಕಾಗುವ ಮಾಹಿತಿಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಅನುವಾಗುವಂತೆ ಹಾಗೂ ಆಗಿಂದಾಗ್ಗೆ ಹೊರಡಿಸುವ ಸುತ್ತೋಲೆ/ಸರ್ಕಾರದ ಆದೇಶಗಳಿಗೆ ಅನುಸಾರವಾಗಿ ಶಿಫಾರಸ್ಸು ಮಾಡುವ/ಅನುಮತಿಯನ್ನು ನೀಡುವ ಪ್ರಾಧಿಕಾರಿಗಳು ಶಿಫಾರಸ್ಸು/ಅನುಮತಿಯನ್ನು ದಿನಾಂಕ: 01-05-2019 ರಿಂದ ಆನ್‌ಲೈನ್ ಮುಖಾಂತರವೇ ನಿರ್ವಹಿಸಬೇಕೆಂದು ಆದೇಶಿಸಿದೆ.

ಕರ್ನಾಟಕ ಸಿವಿಲ್ ಸೇವಾ ನಿಯಮಗಳನ್ವಯ ಹೆಚ್ಚುವರಿ ಸೇವೆಯನ್ನು ಪಿಂಚಣಿ ಸೌಲಭ್ಯಕ್ಕೆ ಪರಿಗಣಿಸಲು ಆನ್‌ಲೈನ್ ಪ್ರಕ್ರಿಯೆ ಮಾಹಿತಿಯನ್ನು ಇಲಾಖೆಯ ವೈಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ.

[ಡಾ|| ಪಿ.ಸಿ.ಜಾಫರ್]
ಆಯುಕ್ತರು

**ಇವರಿಗೆ:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-ರವರಿಗೆ ಗೌರವಗಳೊಂದಿಗೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಡಳಿತ ಮತ್ತು ಸುಧಾರಣೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ವಿಭಾಗೀಯ ಸಹ ನಿರ್ದೇಶಕರು
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿ ಪಂಚಾಯತ್ ರಾಜ್ ಇಲಾಖೆ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು (ಆಡಳಿತ) ಮತ್ತು ಉಪ ನಿರ್ದೇಶಕರುಗಳು (ಅಭಿವೃದ್ಧಿ).
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.
10. ಆಯುಕ್ತರ ಆಪ್ತ ಕಾರ್ಯದರ್ಶಿಯವರು ಇವರಿಗೆ ಮಾಹಿತಿಗಾಗಿ
11. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-1.**

**ಸಂಖ್ಯೆ:** ಸಿ2(5)/ವೇ.ಬ/01/2018-19 **ದಿನಾಂಕ:**03/04/2019

**-:ಅಧಿಕೃತ ಜ್ಞಾಪನ:-**

**ವಿಷಯ:-** ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಕಾಲಮಿತಿ ವೇತನ ಬಡ್ತಿ/ಸ್ವಯಂ ಚಾಲಿತ ವೇತನ ಬಡ್ತಿ / ಹೆಚ್ಚುವರಿ ವೇತನ ಬಡ್ತಿ / ವಿಶೇಷ ವೇತನ ಬಡ್ತಿ / ಅಂಗವಿಕಲ ಭತ್ಯೆ ಹಾಗೂ ಇತರೆ ಭತ್ಯಗಳನ್ನು ಪಡೆಯಲು ಅನುಮತಿಗಾಗಿ ಸಲ್ಲಿಸುವ ಪ್ರಸ್ತಾವನೆಯನ್ನು ಆನ್‌ಲೈನ್ ತಂತ್ರಾಂಶದ ಮುಖಾಂತರ ನಿರ್ವಹಿಸಿ ಇತ್ಯರ್ಥಪಡಿಸುವ ಬಗ್ಗೆ.

**ಉಲ್ಲೇಖ:-** ಕರ್ನಾಟಕ ಸಿವಿಲ್ ಸೇವಾ ನಿಯಮಗಳು-1983ರ ನಿಯಮ-3 ರನ್ವಯ.

***************

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಅಧಿಕಾರಿ/ಬೋಧಕ/ಬೋಧಕೇತರ ವೃಂದದೆಲ್ಲಾ ಅಧಿಕಾರಿ / ಸಿಬ್ಬಂದಿಗಳಿಗೆ ಉಲ್ಲೇಖದ ಕೆ.ಸಿ.ಎಸ್. ಸೇವಾ ನಿಯಮದಂತೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿ /15 ಸ್ವಯಂ ಚಾಲಿತ ವೇತನ ಬಡ್ತಿ /20, 25, 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿ ಹಾಗೂ/ಸ್ಥಗಿತ ವೇತನ ಬಡ್ತಿ/ಹೆಚ್ಚುವರಿ ವೇತನ ಬಡ್ತಿ/ವಿಶೇಷ ವೇತನ ಬಡ್ತಿ/ಅಂಗವಿಕಲ ಭತ್ಯೆ ಹಾಗೂ ಇತರೆ ಭತ್ಯೆಗಳನ್ನು ಸಕಾಲದಲ್ಲಿ ಮಂಜೂರು ಮಾಡುವುದು ಇಲಾಖೆಯ ಜವಾಬ್ದಾರಿಯಾಗಿರುತ್ತದೆ.

ಈ ಪ್ರಕ್ರಿಯೆಯನ್ನು ಸರಳೀಕರಿಸಲು ಹಾಗೂ ತ್ವರಿತಗೊಳಿಸಲು ಆನ್‌ಲೈನ್ ಮುಖಾಂತರ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ದೊರೆಯಬಹುದಾದ ಮೇಲ್ಕಂಡ ವೇತನ ಬಡ್ತಿಗಳನ್ನು ಮಂಜೂರು ಮಾಡಲು ಆನ್‌ಲೈನ್ ನಿರ್ವಹಣಾ ವ್ಯವಸ್ಥೆಯನ್ನು ಸಿದ್ದಪಡಿಸಿದ್ದು, ಇನ್ನು ಮುಂದೆ ಎಲ್ಲಾ ವರ್ಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ವೇತನ ಬಡ್ತಿ ಸೌಲಭ್ಯಗಳನ್ನು ಪಡೆಯಲು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಅಧಿಕಾರಿಗಳು ಮತ್ತು ಸಿಬ್ಬಂದಿಗಳು ವೇತನ ಬಡ್ತಿಗಳನ್ನು ಪಡೆಯಲು ಇಲಾಖೆಯ ಅನುಮತಿಗಾಗಿ ಪ್ರಸ್ತಾವನೆಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಅನುವಾಗುವಂತೆ ಹಾಗೂ ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ಆಗಿದಾಂಗ್ಗೆ ಹೊರಡಿಸುವ ಸರ್ಕಾರದ ಸುತ್ತೋಲೆ/ ಆದೇಶಗಳ ಷರತ್ತುಗಳ ಅನುಸಾರವಾಗಿ ಶಿಫಾರಸ್ಸು ಮಾಡುವ ಮತ್ತು ಅನುಮತಿ ನೀಡುವ ಪ್ರಾಧಿಕಾರಿಗಳು ದಿನಾಂಕ.01/05/2019ರಿಂದ ಈ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರವೇ ನಿರ್ವಹಿಸಿ ಇತ್ಯರ್ಥಪಡಿಸಲು ಆದೇಶಿಸಿದೆ.

ಕರ್ನಾಟಕ ನಾಗರೀಕ ಸೇವಾ ನಿಯಮಗಳಲ್ಲಿ ಅವಕಾಶ ಕಲ್ಪಿಸಿದಂತೆ 10 ವರ್ಷಗಳ ಕಾಲಮಿತಿ ವೇತನ ಬಡ್ತಿ / 15 ಸ್ವಯಂ ಚಾಲಿತ ವೇತನ ಬಡ್ತಿ / 20, 25, 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿ ಹಾಗೂ ಸ್ಥಗಿತ ವೇತನ ಬಡ್ತಿ / ಹೆಚ್ಚುವರಿ ವೇತನ ಬಡ್ತಿ / ವಿಶೇಷ ವೇತನ ಬಡ್ತಿ / ಅಂಗವಿಕಲ ಭತ್ಯೆ ಹಾಗೂ ನಿಯಮಾನುಸಾರ ಅರ್ಹವಿರುವ ಇತರೆ ಭತ್ಯೆಗಳನ್ನು ಮಂಜೂರು ಮಾಡುವ ಪ್ರಕ್ರಿಯೆಯ ತಂತ್ರಾಂಶ ಹಾಗೂ ಆನ್‌ಲೈನ್ ವ್ಯವಸ್ಥೆಯ ಪೂರ್ಣ ಮಾಹಿತಿಯನ್ನು ಇಲಾಖೆಯ ವೈಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ. ಅದರಂತೆಯೇ ದಿನಾಂಕ:01/05/2019ರಿಂದ 10 ವರ್ಷಗಳ ಕಾಲಮಿತಿ ವೇತನ ಬಡ್ತಿ /15 ಸ್ವಯಂ ಚಾಲಿತ ವೇತನ ಬಡ್ತಿ /20, 25, 30 ವರ್ಷಗಳ ಹೆಚ್ಚುವರಿ ವೇತನ ಬಡ್ತಿ ಹಾಗೂ/ಸ್ಥಗಿತ ವೇತನ ಬಡ್ತಿ/ಹೆಚ್ಚುವರಿ ವೇತನ ಬಡ್ತಿ/ವಿಶೇಷ ವೇತನ ಬಡ್ತಿ/ಅಂಗವಿಕಲ ಭತ್ಯೆ ಹಾಗೂ ನಿಯಮಾನುಸಾರ ಅರ್ಹವಿರುವ ಇತರೆ ಭತ್ಯೆಗಳನ್ನು ಮಂಜೂರು ಮಾಡುವ ಪ್ರಕ್ರಿಯೆಯನ್ನು ಕಡ್ಡಾಯವಾಗಿ ಆನ್ ಲೈನ್ ಮೂಲಕ ನಿರ್ವಹಿಸಿ ಇತ್ಯರ್ಥಪಡಿಸಲು ತಿಳಿಸಿದೆ.

3/4/2019

**[ಡಾ॥ ಪಿ.ಸಿ.ಜಾಫರ್]**
**ಆಯುಕ್ತರು**

(ಘಟ...2ಕ್ಕೆ)

**ಇವರಿಗೆ:**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–ರವರಿಗೆ ಗೌರವಗಳೊಂದಿಗೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆಡಳಿತ ಮತ್ತು ಸುಧಾರಣೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂ.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ನಿರ್ದೇಶಕರುಗಳು.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳು.
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು.
8. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಮತ್ತು (ಅಭಿವೃದ್ಧಿ)
9. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು.
10. ಆಯುಕ್ತರ ಆಪ್ತ ಕಾರ್ಯದರ್ಶಿಯವರು.
11. ಕಛೇರಿ ಪ್ರತಿ.

**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-1.**

**ಸಂಖ್ಯೆ: ಸಿ1(3)/ಉ.ವ್ಯಾ.ಅ-149/2018-19** **ದಿನಾಂಕ: 03/04/2019**

**-:ಅಧಿಕೃತ ಜ್ಞಾಪನ:-**

**ವಿಷಯ:-** ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ವಿವಿಧ ಉನ್ನತ ವ್ಯಾಸಂಗ ಪಡೆಯಲು ಅನುಮತಿಗಾಗಿ ಪ್ರಸ್ತಾವನೆಯನ್ನು ಆನ್‌ಲೈನ್ ತಂತ್ರಾಂಶದ ಮುಖಾಂತರ ಸಲ್ಲಿಸುವ ಬಗ್ಗೆ.

**ಉಲ್ಲೇಖ:-** ಕರ್ನಾಟಕ ಸಿವಿಲ್ ಸೇವಾ ನಿಯಮಗಳು-1958ರ ನಿಯಮ-61ರ ಪರಿಶಿಷ್ಟದಲ್ಲಿರುವ ಷರತ್ತುಗಳು.

***************

ಸಾರ್ವಜನಿಕ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರೂಪ್-ಎ ಮತ್ತು ಬಿ ಅಧಿಕಾರಿಗಳು ಹಾಗೂ ಬೋಧಕ ವೃಂದದ ಸಿಬ್ಬಂದಿಯ ಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿದೆ. ಇಲಾಖೆಯ ಮೂಲ ಉದ್ದೇಶದಂತೆ, ಸೇವಾ ನಿರತ ಅಧಿಕಾರಿಗಳು/ಬೋಧಕ ವೃಂದದವರಿಗೆ ನಿರಂತರ ಕಲಿಕಾ ಅನುಭವ ಅತ್ಯವಶ್ಯಕವಾಗಿದೆ. ಈ ಉದ್ದೇಶದಿಂದ ಅಧಿಕಾರಿಗಳು/ಬೋಧಕ ವೃಂದದವರಿಗೆ ವೃತ್ತಿ ಕೌಶಲ್ಯ ಸಂಬಂಧ ವಿವಿಧ ಉನ್ನತ ವ್ಯಾಸಂಗದ ಸೌಲಭ್ಯಗಳನ್ನು ಪಡೆಯಲು ಅನುಮತಿಗಾಗಿ ಪ್ರಾಧಿಕಾರಿಗಳಿಗೆ ಶಿಫಾರಸ್ಸು ಮನವಿಗಳು ಸಲ್ಲಿಕೆಯಾಗುತ್ತಿದೆ. ಈ ಸೌಲಭ್ಯವನ್ನು ಸಕಾಲದಲ್ಲಿ ಒದಗಿಸುವುದು ಇಲಾಖೆಯ ಆದ್ಯ ಕರ್ತವ್ಯವಾಗಿರುತ್ತದೆ. ಈ ಪ್ರಕ್ರಿಯೆಯನ್ನು ಸರಳೀಕರಿಸಲು ಹಾಗೂ ತ್ವರಿತಗೊಳಿಸಲು ಆನ್‌ಲೈನ್ ಮುಖಾಂತರ ಉನ್ನತ ವ್ಯಾಸಂಗದ ನಿರ್ವಹಣಾ ವ್ಯವಸ್ಥೆಯನ್ನು ಸಿದ್ದಪಡಿಸಿದ್ದು, ಇನ್ನು ಮುಂದೆ ಎಲ್ಲಾ ವರ್ಗದ ಅಧಿಕಾರಿಗಳು/ಬೋಧಕ ಸಿಬ್ಬಂದಿಗಳು ಉನ್ನತ ವ್ಯಾಸಂಗ ಸೌಲಭ್ಯಗಳನ್ನು ಪಡೆಯಲು ಆನ್‌ಲೈನ್ ಮುಖಾಂತರವೇ ವ್ಯವಹರಿಸಬೇಕಾಗಿದೆ.

ಅಧಿಕಾರಿಗಳು/ಬೋಧಕರು ತಮ್ಮ ಕಾರ್ಯ ವ್ಯಾಪ್ತಿಗೆ ಸೀಮಿತವಾಗಿರುವ ಉನ್ನತ ವ್ಯಾಸಂಗದ ಸೌಲಭ್ಯಗಳನ್ನು ಪಡೆಯಲು ಇಲಾಖೆಯ ಅಧಿಕಾರಿಗಳು, ಉನ್ನತ ವ್ಯಾಸಂಗ ಅನುಮತಿಗಾಗಿ ಪ್ರಸ್ತಾವನೆಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಅನುವಾಗುವಂತೆ ಹಾಗೂ ಕರ್ನಾಟಕ ಸಿವಿಲ್ ಸೇವಾ ನಿಯಮಗಳಡಿಯಲ್ಲಿ ಉನ್ನತ ವ್ಯಾಸಂಗಕ್ಕಾಗಿ ಆಗಿದಾಂಗ್ಗೆ ಹೊರಡಿಸುವ ಸುತ್ತೋಲೆ/ ಸರ್ಕಾರದ ಆದೇಶಗಳ ಷರತ್ತುಗಳ ಅನುಸಾರವಾಗಿ ಶಿಫಾರಸ್ಸು ಮಾಡುವ/ಅನುಮತಿಯನ್ನು ನೀಡುವ ಪ್ರಾಧಿಕಾರಿಗಳು ದಿನಾಂಕ: 01/05/2019 ರಿಂದ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರವೇ ನಿರ್ವಹಿಸಲು ಆದೇಶಿಸಿದೆ.

ಇಂತಹ ಮನವಿಗಳನ್ನು ನಿಗಧಿತ ಪ್ರಮಾಣ ಪತ್ರ (affidavit) ದೊಂದಿಗೆ ಆನ್‌ಲೈನ್ ಸಲ್ಲಿಸುವುದು. ಶಿಫಾರಸ್ಸು ಮಾಡುವ ಪ್ರಾಧಿಕಾರ ಟಿಡಿಎಸ್ ನಲ್ಲಿನ ಮಾಹಿತಿಯಂತೆ ನೌಕರರ ವಯಸ್ಸು, ಸೇವಾ ವಿವರ, ಆಯ್ಕೆ ಮಾಡಿರುವ ಉನ್ನತ ವ್ಯಾಸಂಗದ ವಿಷಯ, ಸದರಿ ಅಧಿಕಾರಿ ಮತ್ತು ಬೋಧಕ ವೃಂದದ ವೃತ್ತಿ ಕೌಶಲ್ಯಕ್ಕೆ ಸಂಬಂಧಿಸಿದೆಯೇ ಎಂಬುದನ್ನು ಪರಿಶೀಲಿಸಿ ಅನುಮೋದನೆ ಪ್ರಾಧಿಕಾರಕ್ಕೆ ಸಲ್ಲಿಸುವುದು.

ಅನುಮೋದನೆ ಪ್ರಾಧಿಕಾರ ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿ ಅನುಮತಿ/ತಿರಸ್ಕರಿಸುವ ಬಗ್ಗೆ, ಶಿಫಾರಸ್ಸು ಮಾಡುವ ಪ್ರಾಧಿಕಾರ ಮತ್ತು ಅರ್ಜಿದಾರರಿಗೆ ತಿಳಿಸುವ, ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ, ಟಿಡಿಎಸ್ ನಲ್ಲಿ ಇರುವ ಮಾಹಿತಿಯನ್ನು ಅಪ್ ಲೋಡ್ ಮಾಡಲು ಮತ್ತು ಹೆಚ್ಚುವರಿ ಮಾಹಿತಿ ಕೇಳುವ ಮತ್ತು ಅರ್ಜಿದಾರರು ಹೆಚ್ಚುವರಿ ಮಾಹಿತಿಯನ್ನು ಕಳುಹಿಸುವ ವ್ಯವಸ್ಥೆಯನ್ನು ಹಾಗೂ ಅನುಮತಿ ಪತ್ರವನ್ನು ನೇರವಾಗಿ ಅರ್ಜಿದಾರರು ಪಡೆದುಕೊಳ್ಳುವ ವ್ಯವಸ್ಥೆಯನ್ನು ಸಹಾ ಆನ್‌ಲೈನ್ ನಲ್ಲಿ ಅಳವಡಿಸಲಾಗಿದೆ.

ಈ ಸಂಬಂಧ ಆನ್ ಲೈನ್ ವ್ಯವಸ್ಥೆಯ ಹೆಚ್ಚಿನ ಮಾಹಿತಿಯನ್ನು ಇಲಾಖೆ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲಾಗಿದೆ.

[ಡಾ॥ ಪಿ.ಸಿ.ಜಾಫರ್]
ಆಯುಕ್ತರು

(ಪುಟ 2ಕ್ಕೆ)